# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 503 |
| 02. | ಮಾನ್ಯ ಸದಸ್ಯರ ಹೆಸರು | : ಶ್ರೀ ನಸೀರ್ ಅಹ್ಮದ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 03. | ಉತ್ತರಿಸುವ ದಿನಾಂಕ | : 16.12.2021 |
| 04. | ಉತ್ತರಿಸುವ ಸಚಿವರು. | : ಗೃಹ ಸಚಿವರು |

| ಪ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತ್ರಿವಳಿ ತಲಾಖ್ ನಿಷೇಧ ಕಾನೂನು ಜಾರಿಯಾದಾಗಿನಿಂದ ಇದುವರೆಗೂ ರಾಜ್ಯದಲ್ಲಿ ಈ ಕಾನೂನಿನಡಿ ದಾಖಲಾದ ಪ್ರಕರಣಗಳೆಷ್ಟು; ಹಾಗೂ ಈ ಪ್ರಕರಣಗಳು ಪ್ರಸ್ತುತ ಯಾವ ಹಂತದಲ್ಲಿವೆ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ The Muslim Women(Protection of Rights on Marriage) Act, 2019 ರಡಿಯಲ್ಲಿ ಇದುವರೆವಿಗೂ ದಾಖಲಾಗಿರುವ ಘಟಕಾವಾರು ಪ್ರಕರಣಗಳ ಸಂಖ್ಯೆಯ ವಿವರಗಳು ಈ ಕೆಳಕಂಡಂತಿದೆ.<br><br>(ಕೋಷ್ಟಕ ಕೆಳಗಿದೆ)<br><br>ಮುಂದುವರೆದು, ಸದರಿ ಪ್ರಕರಣಗಳ ಪ್ರಸ್ತುತ ಹಂತದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

| ಘಟಕ | 2019 | 2020 | 2021 |
|---|---|---|---|
| ಬೆಂಗಳೂರು ನಗರ | 5 | 9 | 9 |
| ಮಂಗಳೂರು ನಗರ | 1 | 1 | 0 |
| ಬೆಳಗಾವಿ ನಗರ | 2 | 0 | 0 |
| ಬೆಂಗಳೂರು ಜಿಲ್ಲೆ | 0 | 0 | 1 |
| ಮಂಡ್ಯ ಜಿಲ್ಲೆ | 2 | 2 | 1 |
| ಬೆಳಗಾವಿ ಜಿಲ್ಲೆ | 3 | 1 | 0 |
| ಚಿಕ್ಕಮಗಳೂರು ಜಿಲ್ಲೆ | 0 | 0 | 2 |
| ಉಡುಪಿ ಜಿಲ್ಲೆ | 3 | 1 | 0 |
| ಉತ್ತರ ಕನ್ನಡ ಜಿಲ್ಲೆ | 1 | 2 | 1 |
| ಕಲಬುರಗಿ ಜಿಲ್ಲೆ | 1 | 0 | 0 |
| ರಾಯಚೂರು ಜಿಲ್ಲೆ | 1 | 0 | 0 |
| ಶಿವಮೊಗ್ಗ ಜಿಲ್ಲೆ | 1 | 0 | 1 |
| ಒಟ್ಟು | 20 | 16 | 15 |

ಒಇ 42 ಎಸ್‌ಡಿಎನ್ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

**<u>ಅನುಬಂಧ-ಅ:</u>**

**<u>ರಾಜ್ಯದಲ್ಲಿ ತ್ರಿವಳಿ ತಲಾಖ್ ನಿಷೇಧ ಕಾನೂನಿನಡಿಯಲ್ಲಿ ದಾಖಲಾದ ಪ್ರಕರಣಗಳ ಘಟಕಾವಾರು ವಿವರ:</u>**

| Sl. No. | Name of the PS | Crime No. & Section of Law | Details | Present Stage |
|---|---|---|---|---|
| **ಬೆಂಗಳೂರು ನಗರ** | | | | |
| 1. | ಸುದ್ದಗುಂಟೆಪಾಳ್ಯ ಪೊಲೀಸ್ ಠಾಣೆ | 163/2019 The Muslim Women(Protection of Rights on Marriage) Act, 2019 (U/s-4); IPC 1860 (U/s-498A) | ಪಿರ್ಯಾದುದಾರರು 2010 ರಲ್ಲಿ ಸಮೇರುಲ್ಲಾ ರೆಹಮತ್ ರವರೊಂದಿಗೆ ವಿವಾಹವಾಗಿದ್ದು ವಿವಾಹದ ಸಮಯದಲ್ಲಿ ವರದಕ್ಷಿಣೆಯನ್ನು ನೀಡಿದ್ದು ಆದರೂ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿ ವರದಕ್ಷಿಣೆ ತರಲು ಪೀಡಿಸುತ್ತಿದ್ದು ಇದಕ್ಕೆ ವಿರೋದಿಸಿದ್ದಕ್ಕೆ 14.08.2019 ರಂದು 3 ಬಾರಿ ತಲಾಕ್ ಎಂದು ಕೂಗಿ ವಿಚ್ಛೇದನ ನೀಡಿರುತ್ತಾರೆ. ಅವರ ವಿರುದ್ಧ ಕಾನುನು ಕ್ರಮಕ್ಕಾಗಿ ದೂರು | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |
| 2. | ವಿವೇಕನಗರ ಪೊಲೀಸ್ ಠಾಣೆ | 150/2019 IPC 1860 (U/s-498A); DOWRY PROHIBITION ACT, 1961 (U/s-3,4); IPC 1860 (U/s-149); The Muslim Women(Protection of Rights on Marriage) Act, 2019 (U/s-4) | ಪಿರ್ಯಾದುದಾರರು 2014 ರಲ್ಲಿ ಮಹಮ್ಮದ್ ಸಾಹೀದ್ ರನ್ನು ಗುರು ಹಿರಿಯರ ಸಮ್ಮುಕದಲ್ಲಿ ವಿವಾಹವಾಗಿದ್ದು ಆಗ ಬಂಗಾರದ ಒಡವೆಗಳು ಹಾಗೂ ಗಾಡಿ ಹಾಗೂ ಮನೆಗೆ ಬೇಕಾದ ಎಲ್ಲಾ ವಸ್ತುಗಳನ್ನು ನೀಡಿದ್ದು ಆದರೂ ಅವರ ಮನೆಯವರೆಲ್ಲಾ ಸೇರಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿ ವರದಕ್ಷಿಣೆ ತರಲು ಪೀಡಿಸುತ್ತಿದ್ದು ಇದಕ್ಕೆ ವಿರೋದಿಸಿದ್ದಕ್ಕೆ 14.09.2019 ರಂದು 3 ಬಾರಿ ತಲಾಕ್ ಎಂದು ಕೂಗಿ ನನ್ನ ಮಾಂಗಲ್ಯವನ್ನು ಕಿತ್ತುಕೊಂಡು ವಿಚ್ಛೇದನ ನೀಡಿರುತ್ತಾರೆ. ಅವರ ವಿರುದ್ಧ ಕಾನುನು ಕ್ರಮಕ್ಕಾಗಿ ದೂರು | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |
| 3. | ಆರ್.ಟಿ. ನಗರ ಪೊಲೀಸ್ ಠಾಣೆ | 218/2019 DOWRY PROHIBITION ACT, 1961 (U/s-3,4); The Muslim Women(Protection of Rights on Marriage) Act, 2019 (U/s-4); IPC 1860 (U/s-498A) | ಪಿರ್ಯಾದುದಾರರು 2009 ರಲ್ಲಿ ಸೈಯ್ಯದ್ ಮುಖಮಿಲ್ಲಾ ರವರೊಂದಿಗೆ ಸಂಪ್ರದಾಯದಂತೆ ವಿವಾಹವಾಗಿದ್ದು ಆಗ ವರದಕ್ಷಿಣೆ ನೀಡಿದ್ದು ನಂತರ ಅವರ ಗಂಡ ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದು ಚಿಕಿತ್ಸೆ ಕೊಡಿಸಿದ್ದು ನಂತರ ಮಗು ಬೇಡವೆಂದು ನಿರಾಕರಿಸಿ ಹಿಂಸೆ ನೀಡಿ 2ನೇ ಮದುವೆ ಮಾಡಿಕೊಳ್ಳಲು 2019 ರಲ್ಲಿ ಲಿಖಿತ ನೋಟೀಸ್ ನೀಡಿ ತಲಾಖ್ ಎಂದು ಘೋಷಿಸಿರುತ್ತಾರೆಂದು ಅವರ ವಿರುದ್ಧ ಕಾನುನು ಕ್ರಮಕ್ಕಾಗಿ ದೂರು | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |
| 4. | ಆರ್.ಟಿ. ನಗರ ಪೊಲೀಸ್ ಠಾಣೆ | 234/2019 The Muslim Women(Protection of Rights | ಪಿರ್ಯಾದುದಾರರು 19 ವರ್ಷಗಳ ಹಿಂದೆ ಸೈಯ್ಯದ್ ಅಪ್ಸರ್ ನೊಂದಿಗೆ ಸಂಪ್ರದಾಯದಂತೆ ವಿವಾಹವಾಗಿದ್ದು ನಂತರ ನಮಗೆ 5 ಜನ ಹೆಣ್ಣು | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |

| | | | | |
|---|---|---|---|---|
| | | on Marriage) Act, 2019 (U/s-4); IPC 1860 (U/s-34,498A) | ಮಕ್ಕಳಿದ್ದು ಅದರಲ್ಲಿ ಮೊದಲ ಮಗಳು ಮಾನಸಿಕವಾಗಿ ಅಸ್ವಸ್ಥವಾಗಿದ್ದು ಪ್ರತಿ ದಿನ ಮನೆಯಲ್ಲಿ ನೀನು ಹೆಣ್ಣು ಮಕ್ಕಳನ್ನು ಹೆತ್ತಿದ್ದೀಯಾ ಎಂದು ಗಲಾಟೆ ಮಾಡುತ್ತಿದ್ದು ಇತ್ತೀಚೆಗೆ 3 ಬಾರಿ ತಲಾಖ್ ಎಂದು ಹೇಳಿದ್ದು ಇದಕ್ಕೆ ಅವರ ತಂಗಿಯ ಕುಮ್ಮಕ್ಕು ಇರುತ್ತದೆಂದು ಅವರ ವಿರುದ್ಧ ಕಾನುನು ಕ್ರಮಕ್ಕಾಗಿ ದೂರು | |
| 5. | ವೈಟ್‌ಫೀಲ್ಡ್ ಪೊಲೀಸ್ ಠಾಣೆ | 448/2019 IPC 1860 (U/s-498A,149,323,354) | ಪಿರ್ಯಾದುದಾರರು 2018ರಲ್ಲಿ ಸೈಯ್ಯದ್ ಆದಲ್ ಅನೀಸ್ ರವರೊಂದಿಗೆ ವಿವಾಹವಾಗಿದ್ದು ನಂತರ ಗಂಡ ಕೆಲಸದ ನಿಮಿತ್ತ ಆಸ್ಟ್ರೇಲಿಯಾಗೆ ಹೋಗಿದ್ದು ನಂತರ ಅವರ ಮನೆಯವರು ಪಿರ್ಯಾದಿಗೆ ಮಾನಸಿಕ ಹಾಗೂ ದೈಹಹಿಕವಾಗಿ ಕಿರುಕುಳ ನೀಡಿದ್ದು ಈ ಬಗ್ಗೆ ಪಿರ್ಯಾದಿಯ ಗಂಡ ಯಾವುದೇ ರೀತಿ ಪೋನ್ ಮಾಡುವುದಾಗಲಿ ಬಂದು ಹೋಗುವುದಾಗಲಿ ಮಾಡಿರುವುದಿಲ್ಲ. ನಂತರ ವಿದೇಶದಿಂದ ಬಂದು ಜನರನ್ನು ಮನೆಗೆ ಕರೆತಂದು ನನಗೆ ಹಾಗೂ ನನ್ನ ತಮ್ಮನಿಗೆ ಹೊಡೆದಿರುತ್ತಾರೆಂದು ಹಾಗೂ ಗಲಾಟೆ ಮಾಡಿರುತ್ತಾರೆಂದು ದೂರು. | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |
| 6. | ಶಿವಾಜಿನಗರ ಮಹಿಳಾ ಪೊಲೀಸ್ ಠಾಣೆ | 33/2020 DOWRY PROHIBITION ACT, 1961 (U/s-3,4); The Muslim Women(Protection of Rights on Marriage) Act, 2019 (U/s-4,3); IPC 1860 (U/s-34,498A,420,323,354) | ಪಿರ್ಯಾದುದಾರರು 2020 ರಲ್ಲಿ ಮೊಹಸಿನ್ ಸಲಾಂ ರನ್ನು ವಿವಾಹವಾಗಿದ್ದು ಮದುವೆಯ ಸಮಯದಲ್ಲಿ ವರದಕ್ಷಿಣೆ ನೀಡಿದ್ದು ನಂತರ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿದ್ದು ಹೊಡೆದು ಬಡಿದು 2019ರಲ್ಲಿ ಮಂಗಳೂರಿನ ಕೀನ್ಯಾ ಮಸೀದಿಗೆ ಹೋಗಿ ತಲಾಕ್ ನೀಡಿರುವುದಾಗಿ ತಿಳಿಸಿದ್ದು ಇದಕ್ಕೆ ಅವರ ಮನೆಯವರ ಕುಮ್ಮಕ್ಕು ಇದೆಯೆಂದು ದೂರು. | ತನಿಖೆ ಬಾಕಿಯಲ್ಲಿದೆ. |
| 7. | ಡಿ.ಜೆ.ಹಳ್ಳಿ ಪೊಲೀಸ್ ಠಾಣೆ | 44/2020 IPC 1860 (U/s-498A,149); DOWRY PROHIBITION ACT, 1961 (U/s-3,4); The Muslim Women(Protection of Rights on Marriage) Act, 2019 (U/s-4) | ಪಿರ್ಯಾದುದಾರರು 2019 ರಲ್ಲಿ ಮೊಹದ್ ಇಮ್ರಾನ್ ಎಂಬುವರನ್ನು ಸಂಪ್ರದಾಯದಂತೆ ವಿವಾಹವಾಗಿದ್ದು ಆಗ ವರದಕ್ಷಿಣೆ ನೀಡಿದ್ದು ಆದರೂ ಸಹ ಮದುವೆ ಸರಿಯಾಗಿ ಮಾಡಿಕೊಟ್ಟಿಲ್ಲವೆಂದು ಹಾಗೂ ನನಗೆ ನನ್ನ ತಂದೆ ಮನೆಯವರು ಕೊಟ್ಟ ಎಲ್ಲಾ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಡುವಂತೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದ್ದು ನಂತರ ತಲಾಕ್ ನೀಡಿರುತ್ತಾರೆಂದು ದೂರು. | OD |
| 8. | ಶಿವಾಜಿನಗರ ಮಹಿಳಾ ಪೊಲೀಸ್ ಠಾಣೆ | 52/2020 IPC DOWRY PROHIBITION ACT, 1961 (U/s-3,4); The Muslim Women(Protection of Rights on Marriage) Act, 2019 (U/s-4,3); IPC | ಪಿರ್ಯಾದುದಾರರು 2019 ರಲ್ಲಿ . ಸೈಯ್ಯದ್ ರಿಯಾಜ್ ಪಾಷಾ ರನ್ನು ಸಂಪ್ರದಾಯಂದತೆ ವಿವಾಹಚವಾಗಿದ್ದು ಮದುವೆಯ ಸಮಯದಲ್ಲಿ ವರದಕ್ಷಿಣೆ ನೀಡಿದ್ದು ನಂತರ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿದ್ದು ಹೊಡೆದು ಬಡಿದು ತಲಾಕ್ ನೀಡುವುದಾಗಿ ತಿಳಿಸಿದ್ದು ಇನ್ನು ಜನಿಸದ ಮಗುವಿನ ಮೇಲೆ ಪರಿಣಾಮ ಬೀರುತ್ತದೆಂದು ದೂರು. | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |

| | | | | |
|---|---|---|---|---|
| | | 1860 (U/s-498A,506(B)) | | |
| 9. | ಡಿ.ಜೆ.ಹಳ್ಳಿ ಪೊಲೀಸ್ ಠಾಣೆ | 136/2020 DOWRY PROHIBITION ACT, 1961 (U/s-3,4); The Muslim Women(Protection of Rights on Marriage) Act, 2019 (U/s-4); IPC 1860 (U/s-506,34,498A,504,323,343) | ಪಿರ್ಯಾದುದಾರರು ಮಹಮ್ಮದ್ ತಾರೀಖ್ ಇಮ್ರಾನ್ ರನ್ನು ಪ್ರೀತಿಸಿ ಮನೆಯವರ ಒಪ್ಪಿಗೆ ಪಡೆದು ವಿವಾಹವಾಗಿದ್ದು, ಅದ್ದೂರಿಯಾಗಿ ವಿವಾಹ ಮಾಡಿಕೊಟ್ಟಿದ್ದು ವರೆದಕ್ಷಿಣೆಯನ್ನು ನೀಡಿದ್ದು ನಂತರ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ನೀಡಿದ್ದು ಹೊಡೆದು ಬಡಿದು ಗಲಾಟೆ ಮಾಡುತ್ತಿದ್ದು ನನಗೂ ಹಾಗೂ ನನ್ನ ಮನೆಯವರಿಗೂ ಜೀವ ಬೆದರಿಕೆ ಹಾಕಿದ್ದು ತಲಾಕ್ ನೀಡಿರುತ್ತಾರೆಂದು ದೂರು. | ಬಿ ವರದಿ ಅಂಗೀಕೃತವಾಗಿದೆ. |
| 10. | ಶಿವಾಜಿನಗರ ಮಹಿಳಾ ಪೊಲೀಸ್ ಠಾಣೆ | 50/2020 DOWRY PROHIBITION ACT, 1961 (U/s-3,4); Juvenile Justice (Care and Protection of Children) Act, 2015 (U/s-75); The Muslim Women(Protection of Rights on Marriage) Act, 2019 (U/s-3); IPC 1860 (U/s-354C,506,34,498A,323) | ಪಿರ್ಯಾದಿಯ ಪತಿ ಮತ್ತು ಆತನ ಕುಟುಂಬ ಸದಸ್ಯರು ಪಿರ್ಯಾದಿಗೆ ಹೆಣ್ಣು ಮಗು ಆಯಿತೆಂಬ ಕಾರಣಕ್ಕೆ ಪಿರ್ಯಾದಿಗೆ ಮಾನಸಿಕ ಕಿರುಕುಳ ನೀಡಿರುತ್ತಾರೆ ಹಾಗು ವರದಕ್ಷಿಣೆ ಕಿರುಕುಳ ನೀಡಿರುತ್ತಾರೆ. ಪಿರ್ಯಾದಿಯ ಪತಿ ಪಿರ್ಯಾದಿಗೆ ದೈಹಿಕ ಕಿರುಕುಳ ಮಾಡಿರುವುದೂ ಅಲ್ಲದೇ ತ್ರಿವಳಿ ತಲಾಖ್ ನೀಡಿರುತ್ತಾನೆ. | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |
| 11. | ಡಿ.ಜೆ.ಹಳ್ಳಿ ಪೊಲೀಸ್ ಠಾಣೆ | 143/2020 Section 504, 506, 420 IPC Section 3, 4 The Muslim Women(Protection of Rights on Marriage) Act, 2019 | ಪಿರ್ಯಾದಿಯ ಪತಿ ಪಿರ್ಯಾದಿಯ ಸಮ್ಮತಿಯಿಲ್ಲದೆ ಸುಳ್ಳು ದಾಖಲಾತಿ ನೀಡಿ ಸಲ್ಮಾ, ಸುಲ್ತಾನ್ ರವರುಗಳನ್ನು ಮುದುವೆಯಾಗಿ, ನಂತರ ಪಿರ್ಯಾದಿಗೆ ತ್ರಿವಳಿ ತಲಾಖ್ ನೀಡಿರುತ್ತಾನೆ. | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |
| 12. | ಡಿ.ಜೆ.ಹಳ್ಳಿ ಪೊಲೀಸ್ ಠಾಣೆ | 189/2020 The Muslim Women(Protection of Rights on Marriage) Act, 2019 (U/s-4,3); IPC 1860 (U/s-354(A),506,498A) | ಪಿರ್ಯಾದಿಯ 2ನೇ ಪತಿಯು ಪಿರ್ಯಾದಿಯೊಂದಿಗೆ ಮದುವೆಯಾದ ನಂತರ, ಪಿರ್ಯಾದಿಗೆ ಕಿರುಕುಳ ನೀಡಿ, ಪಿರ್ಯಾದಿಯ ಮಗಳೊಂದಿಗೆ ಲೈಂಗಿಕ ದೌರ್ಜನ್ಯವೆಸಗಿ, ಪಿರ್ಯಾದಿಗೆ ತ್ರಿವಳಿ ತಲಾಕ್ ನೀಡಿರುತ್ತಾನೆ. | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |
| 13. | ಆರ್.ಟಿ. ನಗರ ಪೊಲೀಸ್ ಠಾಣೆ | 257/2020, DOWRY PROHIBITION ACT, 1961 (U/s-3,4); The Muslim Women(Protection of Rights on Marriage) Act, 2019 (U/s-4,3); IPC | ಪಿರ್ಯಾದಿಯ ಪತಿ ಮತ್ತು ಆತನ ಕುಟುಂಬದ ಸದಸ್ಯರು ಪಿರ್ಯಾದಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿರುತ್ತಾರೆ ಮತ್ತು ಪಿರ್ಯಾದಿಯ ಪತಿ ಪಿರ್ಯಾದಿಗೆ ತ್ರಿವಳಿ ತಲಾಖ್ ನೀಡುತ್ತೇನೆಂದು ಬೆದರಿಕೆ ಒಡ್ಡಿರುತ್ತಾರೆ. | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |

| | | | | |
|---|---|---|---|---|
| | | 1860 (U/s-506,498A) | | |
| 14. | ಪುಟ್ಟೇನಹಳ್ಳಿ ಪೊಲೀಸ್ ಠಾಣೆ | 258/2020 IPC 1860 (U/s-498A,315,326,506,34); DOWRY PROHIBITION ACT, 1961 (U/s-3,4,6); The Muslim Women(Protection of Rights on Marriage) Act, 2019 (U/s-3,4) | ಪಿರ್ಯಾದಿಯ ಪತಿ ಮತ್ತು ಆತನ ಕುಟುಂಬದ ಸದಸ್ಯರು ಪಿರ್ಯಾದಿಗೆ ವರದಕ್ಷಿಣೆ ಕಿರುಕುಳ, ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿದ್ದು, ಪಿರ್ಯಾದಿಯ ಪತಿಯು ಪಿರ್ಯಾದಿಗೆ ತ್ರಿವಳಿ ತಲಾಖ್ ನೀಡಿರುತ್ತಾರೆ. | ತನಿಖೆ ಬಾಕಿಯಲ್ಲಿದೆ. |
| 15. | ಆರ್.ಟಿ. ನಗರ ಪೊಲೀಸ್ ಠಾಣೆ | 31/2021, DOWRY PROHIBITION ACT, 1961 (U/s-3,4); The Muslim Women(Protection of Rights on Marriage) Act, 2019 (U/s-4); IPC 1860 (U/s-498A) | ಪಿರ್ಯಾದಿಯ ಪತಿ ಮತ್ತು ಆತನ ಕುಟುಂಬದ ಸದಸ್ಯರು ಪಿರ್ಯಾದಿಗೆ ವರದಕ್ಷಿಣೆ ಕಿರುಕುಳ, ಮಾನಸಿಕ ಕಿರುಕುಳ ನೀಡಿರುತ್ತಾರೆ. ಪಿರ್ಯಾದಿಯ ಪತಿಯು ಪಿರ್ಯಾದಿಗೆ ತ್ರಿವಳಿ ತಲಾಖ್ ನೀಡಿರುತ್ತಾರೆ. | ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |
| 16. | ಕಾಡುಗೊಂಡನಹಳ್ಳಿ ಪೊಲೀಸ್ ಠಾಣೆ | 65/2021 The Muslim Women(Protection of Rights on Marriage) Act, 2019 (U/s-4) | ಪಿರ್ಯಾದಿಯ ಪತಿಯು ಮತ್ತೊಂದು ಮದುವೆಯಾಗಿದ್ದು, ಪಿರ್ಯಾದಿಯ ಪತಿ ಮತ್ತು ಆತನ ಕುಟುಂಬದವರು ಪಿರ್ಯಾದಿಯೊಂದಿಗೆ ಜಗಳ ಮಾಡಿರುತ್ತಾರೆ ಮತ್ತು ಪಿರ್ಯಾದಿಯ ಪತಿಯು ಪಿರ್ಯಾದಿ ತ್ರಿವಳಿ ತಲಾಖ್ ನೀಡಿರುತ್ತಾನೆ. | ತನಿಖೆ ಬಾಕಿಯಲ್ಲಿದೆ. |
| 17. | ಶಿವಾಜಿನಗರ ಮಹಿಳಾ ಪೊಲೀಸ್ ಠಾಣೆ | 141/2021 The Muslim Women(Protection of Rights on Marriage) Act, 2019 (U/s-4,3); IPC 1860 (U/s-498A,323,504,506) | ಪಿರ್ಯಾದಿಯ ಪತಿ ಪಿರ್ಯಾದಿಗೆ ವರದಕ್ಷಿಣೆ ಕಿರುಕುಳ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಮಾನಸಿಕ ಕಿರುಕುಳ ನೀಡಿ, ತ್ರಿವಳಿ ತಲಾಖ್ ನೀಡಿರುತ್ತಾರೆ. | ತನಿಖೆ ಬಾಕಿಯಲ್ಲಿದೆ. |
| 18. | ಆಡುಗೋಡಿ ಪೊಲೀಸ್ ಠಾಣೆ | 108/2021 IPC 1860 (U/s-504,506,34); The Muslim Women(Protection of Rights on Marriage) Act, 2019 (U/s-4,3) | ಪಿರ್ಯಾದಿಯ ಪತಿಯು ವಿದೇಶದಲ್ಲಿದ್ದ ಸಮಯದಲ್ಲಿ ಪಿರ್ಯಾದುದಾರರ ಪತಿಯ ಕುಟುಂಬ ಸದಸ್ಯರು ಪಿರ್ಯಾದಿಗೆ ಮಾನಸಿಕ ಕಿರುಕುಳ ನೀಡಿರುತ್ತಾರೆ. ಪಿರ್ಯಾದಿಯ ಪತಿಯು ವಿದೇಶದಿಂದ ಬಂದ ನಂತರವೂ ಸಹ ಮತ್ತೊಂದು ಮದುವೆಯಾಗಿರುತ್ತಾನೆ. ಇದನ್ನು ಪ್ರಶ್ನಿಸಿದಾಗ ಪಿರ್ಯಾದಿಯ ಪತಿಯು ಪಿರ್ಯಾದಿಗೆ ತ್ರಿವಳಿ ತಲಾಖ್ ನೀಡಿರುತ್ತಾನೆ. | ಬಿ ವರದಿ ಅಂಗೀಕೃತವಾಗಿದೆ. |
| 19. | ಆರ್.ಟಿ. ನಗರ ಪೊಲೀಸ್ ಠಾಣೆ | 151/2021 DOWRY PROHIBITION ACT, | ಪಿರ್ಯಾದಿಯ ಪತಿ ಆತನ ಕುಟುಂಬದ ಸದಸ್ಯರು ಪಿರ್ಯಾದಿಗೆ ವರದಕ್ಷಿಣೆ ಕುರುಕುಳ, ಮಾನಸಿಕ ಕಿರುಕುಳ ನೀಡಿರುತ್ತಾರೆ ಮತ್ತು ಪಿರ್ಯಾದಿಯ | ಬೆಂಗಳೂರು ಜಿಲ್ಲೆ, |

| | | | | |
|---|---|---|---|---|
| | | 1961 (U/s-3,4); The Muslim Women(Protection of Rights on Marriage) Act, 2019 (U/s-4); IPC 1860 (U/s-498A) | ಪತಿಯು ಪಿರ್ಯಾದಿಗೆ ತ್ರಿವಳಿ ತಲಾಖ್ ನೀಡಿರುತ್ತಾನೆ. | ಬನ್ನೇರುಘಟ್ಟ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿದೆ. |
| 20. | ಹೆಬ್ಬಾಳ ಪೊಲೀಸ್ ಠಾಣೆ | 157/2021 DOWRY PROHIBITION ACT, 1961 (U/s-3,4); The Muslim Women(Protection of Rights on Marriage) Act, 2019 (U/s-4,3); IPC 1860 (U/s-498A) | ಪಿರ್ಯಾದಿಯ ಪತಿ ಆತನ ಕುಟುಂಬದ ಸದಸ್ಯರು ಪಿರ್ಯಾದಿಗೆ ವರದಕ್ಷಿಣೆ ಕುರುಕುಳ, ಮಾನಸಿಕ ಕಿರುಕುಳ ಮತ್ತು ದೈಹಿಕ ಕಿರುಕುಳ ನೀಡಿರುತ್ತಾರೆ ಮತ್ತು ಪಿರ್ಯಾದಿಯ ಪತಿಯು ಪಿರ್ಯಾದಿಗೆ ತ್ರಿವಳಿ ತಲಾಖ್ ನೀಡಿರುತ್ತಾನೆ. | ತನಿಖೆ ಬಾಕಿಯಲ್ಲಿದೆ. |
| 21. | ಬಸವನಗುಡಿ ಮಹಿಳಾ ಪೊಲೀಸ್ ಠಾಣೆ | 244/2021 IPC 1860 (U/s-498A,504,506); DOWRY PROHIBITION ACT, 1961 (U/s-4,3); The Muslim Women(Protection of Rights on Marriage) Act, 2019 (U/s-4) | ಪಿರ್ಯಾದಿಯ ಪತಿ ಮತ್ತು ಆತನ ಕುಟುಂಬದ ಸದಸ್ಯರು ಪಿರ್ಯಾದಿಗೆ ವರದಕ್ಷಿಣೆ ಕಿರುಕುಳ ನೀಡಿ, ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿರುತ್ತಾರೆ. ಪಿರ್ಯಾದಿಯ ಪತಿ ಪಿರ್ಯಾದಿಗೆ ತ್ರಿವಳಿ ತಲಾಖ್ ನೀಡಿರುತ್ತಾರೆ. | ತನಿಖೆ ಬಾಕಿಯಲ್ಲಿದೆ. |
| 22. | ಡಿ.ಜೆ.ಹಳ್ಳಿ ಪೊಲೀಸ್ ಠಾಣೆ | 207/2021 The Muslim Women(Protection of Rights on Marriage) Act, 2019 (U/s-4) | ಪಿರ್ಯಾದಿಯ ಪತಿಯು ಪಿರ್ಯಾದಿಗೆ ಮಾನಸಿಕ ಕಿರುಕುಳ ನೀಡಿ, ತ್ರಿವಳಿ ತಲಾಖ್ ನೀಡಿ, ಮತ್ತೊಂದು ಮದುವೆ ಆಗಿರುತ್ತಾರೆ. | ತನಿಖೆ ಬಾಕಿಯಲ್ಲಿದೆ. |
| 23. | ಕುಮಾರಸ್ವಾಮಿ ಬಡಾವಣೆ ಪೊಲೀಸ್ ಠಾಣೆ | 278/2021 IPC 1860 (U/s-323,504,489A,149); DOWRY PROHIBITION ACT, 1961 (U/s-3,4); The Muslim Women(Protection of Rights on Marriage) Act, 2019 (U/s-3,4) | ಪಿರ್ಯಾದಿಯ ಪತಿಯು ಪಿರ್ಯಾದಿಗೆ ದೈಹಿಕ ಕಿರುಕುಳ ನೀಡಿರುತ್ತಾರೆ. ಪಿರ್ಯಾದಿಯ ಪತಿಯು ಮತ್ತು ಆತನ ಕುಟುಂಬದ ಸದಸ್ಯರು ಸಹ ಪಿರ್ಯಾದಿಗೆ ವರದಕ್ಷಿಣೆ ಕಿರುಕುಳ ಮತ್ತು ಮಾನಸಿಕ ಹಿಂಸೆ ನೀಡಿರುತ್ತಾರೆ. ಪಿರ್ಯಾದಿಯ ಪತಿಯು ಪಿರ್ಯಾದಿಗೆ ತ್ರಿವಳಿ ತಲಾಖ್ ನೀಡಿರುತ್ತಾನೆ. | ತನಿಖೆ ಬಾಕಿಯಲ್ಲಿದೆ. |
| **ಮಂಗಳೂರು ನಗರ** | | | | |
| 24. | ಮಹಿಳಾ ಪೊಲೀಸ್ ಠಾಣೆ | 53/2019 | ಪಿರ್ಯಾದಿದಾರರಾದ ಶ್ರೀಮತಿ ಸಲ್ಮತ್ ತಾಹಿರಾರವರು ಠಾಣೆಗೆ | ಮಾನ್ಯ 1 ನೇ ಹೆಚ್ಚುವರಿ |

| | | | | |
|---|---|---|---|---|
| | | U/s-498A,323 IPC , U/s-4 The Muslim Women (Protection of Rights on Marriage) Act, 2019 | ಹಾಜರಾಗಿ ನೀಡಿದ ಗಣಕೀಕೃತ ದೂರಿನ ಸಾರಾಂಶವೇನೆಂದರೆ ಪಿರ್ಯಾದಿದಾರರಿಗೆ ಆರೋಪಿ ಮೊಹಮ್ಮದ್ ಆಸಿಪ್ ಎಂಬವವರೊಂದಿಗೆ ದಿನಾಂಕ 10-08-2008 ರಂದು ಮುಸ್ಲಿಂ ಸಂಪ್ರದಾಯದಂತೆ ವಿವಾಹವಾಗಿದ್ದು ಮದುವೆಯ ನಂತರ ಪಿರ್ಯಾದಿದಾರರಿಗೆ ನಿರಂತರ ಚಿತ್ರಹಿಂಸೆ ನೀಡಿ ಹೊಡೆದು ಪಿರ್ಯಾದಿ ಹಾಗೂ ಅವರ ಮನೆಯವರ ಸಮ್ಮುಖದಲ್ಲಿ 3 ಬಾರಿ ತಲಾಖ್ ಎಂದು ಹೇಳಿರುತ್ತಾನೆ ಎಂಬಿತ್ಯಾದಿ | ಸೆಷನ್ಸ್ ನ್ಯಾಯಾಲಯದಲ್ಲಿ ಸಿ.ಸಿ ನಂ 1205/2020 ರಂತೆ ವಿಚಾರಣೆಯಲ್ಲಿರುತ್ತದೆ. |
| 25. | ಮಹಿಳಾ ಪೊಲೀಸ್ ಠಾಣೆ | 27/2020 U/s-498A, 504, 506, 323, 34) IPC, U/s-4 The Muslim Women (Protection of Rights on Marriage) Act, 2019 | ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ ಪಿರ್ಯಾದಿದಾರರು ದಿನಾಂಕ 20-08-2006 ರಂದು ಮಹಮ್ಮದ್ ಅಜರುದ್ದೀನ್ ಎಂಬುವರನ್ನು ಮುಸ್ಲಿಂ ಸಂಪ್ರದಾಯದಂತೆ ಮದುವೆಯಾಗಿದ್ದು, ಮದುವೆಯಾದಂದಿನಿಂದಲೇ ಆರೋಪಿತನಾದ ಪಿರ್ಯಾದಿದಾರರ ಹಂಡ ಮಹಮ್ಮದ್ ಅಜರುದ್ದೀನ್ ಹಾಗೂ ಗಂಡನ ತಾಯಿ ಜುಬೈದಾ ರವರು ಪಿರ್ಯಾದಿದಾರರಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿ, ಹಾಗೂ ಹಲ್ಲೆ ನಡೆಸಿ ನೀನು ಸೂಲೆ ಎಂಬುದಾಗಿ ಅವಾಚ್ಯ ಶಬ್ದಗಳಿಂದ ಬೈದು ಮನೆಯಿಂದ ಹೊರ ಹಾಕಿದ್ದಲ್ಲದೇ ಪಿರ್ಯಾದಿದಾರರನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿರುತ್ತಾರೆ ಅಲ್ಲದೇ ಆರೋಪಿ 1 ನೇರವರು ನೋಂದಾಯಿತ ಅಂಚೆ ಸ್ವೀಕೃತಿ ಪತ್ರದೊಂದಿಗೆ ತಲಾಕ್ ಅಹಸಾನ್ ಯಾನ್ ಮುಸ್ಲಿಂ ವಿವಾಹ ವಿಚ್ಛೇದನ ಪತ್ರವನ್ನು ಕಳುಹಿಸಿರುತ್ತಾರೆ ಎಂಬಿತ್ಯಾದಿ | ಮಾನ್ಯ 3 ನೇ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸಿ.ಸಿ ನಂ 1191/2021 ರಂತೆ ವಿಚಾರಣೆಯಲ್ಲಿರುತ್ತದೆ. |
| **ಬೆಳಗಾವಿ ನಗರ** | | | | |
| 26. | ಮಾರ್ಕೆಟ್ ಪಿಎಸ್ | 125/2019 ಕಲಂ.4 Muslim women (protection of rights on marriage) Act-2019 | ಇದರಲ್ಲಿಯ ಫಿರ್ಯಾಧಿ & ಆರೋಪಿತರು ಗಂಡ ಹೆಂಡತಿಯರಿದ್ದು ಇದರಲ್ಲಿ ಆರೋಪಿತನು ಈ ಮೊದಲು ಫಿರ್ಯಾಧಿದಾರಳ ಒಪ್ಪಿಗೆ ಪಡೆಯದೇ ಇನ್ನೊಂದು ವಿವಾಹವಾಗಿದ್ದು ಇದರಿಂದ ಪಿರ್ಯಾದಿದಾರಳು ಮನನೊಂದು ಆರೋಪಿತನ ಮೇಲೆ & ಅವನ ತಂದೆ ತಾಯಿ ಮೇಲೆ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು ದಿ:08/09/2019 ರಂದು ರಾತ್ರಿ 0730 ಗಂಟೆಗೆ ಫಿರ್ಯಾದಿದಾರಳ ಮನೆಗೆ ಬಂದು ಫಿರ್ಯಾಧಿಗೆ ಬೈದು ಅವಳಿಗೆ ತಲಾಕ ತಲಾಕ ತಲಾಕ ಅಂತಾ ಹೇಳಿ ಹೋದ ಅಪರಾಧ. | ಸಿ.ಸಿ.ನಂ. 15/2020 ನೇದ್ದರಲ್ಲಿ ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |
| 27. | ಮಹಿಳಾ ಠಾಣೆ ಪಿಎಸ್ | 68/19 ಕಲಂ-498 (ಎ), 323, 504, 506, ಸಹ ಕಲಂ 34 ಐಪಿಸಿ ಮತ್ತು ಕಲಂ.4 Muslim women (protection of rights on marriage) Act-2019 | ಇದರಲ್ಲಿಯ ಫಿರ್ಯಾಧಿ & ಆರೋಪಿತರು ಗಂಡ ಹೆಂಡತಿಯರಿದ್ದು ಇದರಲ್ಲಿ ಆರೋಪಿತನು ದಿ.15/02/04 ರಲ್ಲಿ ಆಗಿದ್ದು ಪಿರ್ಯಾದಿಗೆ ಮದುವೆಯಾದ ಲಗಾಯತದಿಂದಾ ಕ್ಷುಲಕ ಕಾರಣಕ್ಕಾಗಿ ತಂಟೆ ತೆಗೆಯುವುದು, ಹೊಡಿ ಬಡಿ ಮಾಡುವುದು ಮಾಡಿ ಮಾನಸಿಕ ದೈಹಿಕ ಕಿರುಕುಳ ಕೊಡುತ್ತಾ ಬಂದಿದ್ದರಿಂದ ಫಿರ್ಯಾದಿ ಆರೋಪಿತನ ವಿರುದ್ಧ ಡೊಮೆಸ್ಟಿಕ್ ವೈಲನ್ಸ್ ಕಾಯಿದೆ ಅಡಿ ಕೇಸ್ ಮಾಡಿ ಕೇಸ್ ಮಾಡಿದ್ದು ಸದರಿ ಕೇಸ್ ಫಿರ್ಯಾದಿ ಪರವಾಗಿ ಆಗಿದ್ದು, ಅದೇ | ಸಿಸಿ ನಂ : 83/2020 ನೇದ್ದರಲ್ಲಿ ನ್ಯಾಯಾಂಗ ವಿಚಾರಣೆಯಲ್ಲಿರುತ್ತದೆ. |

| | | | | |
|---|---|---|---|---|
| | | | ಸಿಟ್ಟಿನಿಂದ ಆರೋಪಿತರು ಮೂರು ಸಲ " ತಲಾಖ್ " ಅಂತಾ ಬರೆದ ನೋಟಿಸ್‌ನ್ನು ಬಿದ್ದತ್ ಹಣದ ರೂ-3000/- ಚೆಕ್‌ದೊಂದಿಗೆ ಕಳಿಸಿ ಮಾನಸಿಕ ಹಿಂಸೆ ನೀಡಿದ ಅಪರಾಧ. | |
| **ಬೆಂಗಳೂರು ಜಿಲ್ಲೆ** | | | | |
| 28. | ಬನ್ನೇರುಘಟ್ಟ | **0138/2021**<br>DOWRY PROHIBITION ACT, 1961 (U/s-3,4); The Muslim Women(Protection of Rights on Marriage) Act, 2019 (U/s-4); IPC 1860 (U/s-498A) | ದಿನಾಂಕ-10/10/2021 ಆರ್,ಟಿ.ನಗರ, ಪೊಲೀಸ್ಠಾಣೆಯ ಮೊ.ಸಂ-151/2021 ಕೇಸಿನ ಕಡತವನ್ನು ಕೃತ್ಯ ನಡೆದ ಸರಹದ್ದಿನ ಮೇರೆಗೆ ವರ್ಗಾವಣೆ ನೀಡಿದ್ದು ಪರಿಶೀಲಿಸಲಾಗಿ, ಪಿರ್ಯಾದಿದಾರರು ದಿನಾಂಕ:28/12/2021ದುಸ್ಸೈಯದ್ಸಾದತ್ ಎಂಬುವರ ಜೊತೆ ಮದುವೆಯಾಗಿದ್ದು, ಮದುವೆಯ ಸಮಯದಲ್ಲಿ ವರನ ಕುಟುಂಬದವರ ಬೇಡಿಕೆಯಂತೆ ಚಿನ್ನದ ಒಡವೆಗಳು ಹಾಗೂ ಎರಡೂವರೆ ಲಕ್ಷ ರೂಪಾಯಿಗಳ ವರದಕ್ಷಿಣೆ ಹಣವನ್ನುನೀಡಿ, ಸುಮಾರು ಐದು ಲಕ್ಷ ರೂಪಾಯಿಗಳನ್ನುಖರ್ಚು ಮಾಡಿ ಪಿರ್ಯಾದಿದಾರರ ತಂದೆ ಮದುವೆ ಮಾಡಿಕೊಟ್ಟಿದ್ದು, ಮದುವೆಯಾದ ಒಂದು ವಾರ ಗಂಡ ಹೆಂಡತಿ ಅನ್ಯೋನ್ಯವಾಗಿದ್ದು, ನಂತರದ ದಿನಗಳಲ್ಲಿ ಗಂಡ ಹಾಗೂ ಅತ್ತೆ ಫರ್ಹತುನ್ನೀಸಾ ಹಾಗೂ ಮಾವ ಸೈಯದ್ ಅಬ್ದುಲ್ಬರಿರವರು ಮದುವೆ ಸಮಯದಲ್ಲಿ ಸರಿಯಾದ ವರದಕ್ಷಿಣೆ ನೀಡಿಲ್ಲವೆಂದು ಸಣ್ಣಪುಟ್ಟ ವಿಚಾರಗಳಿಗೆ ಪಿರ್ಯಾದಿದಾರರಿಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದರಿಂದ ಪಿರ್ಯಾದಿದಾರರು ತಮ್ಮ ಒಡವೆಗಳನ್ನು ತೆಗೆದುಕೊಂಡು ತಮ್ಮ ತಂದೆತಾಯಿ ಮನೆಗೆ ಹೋಗಿದ್ದು, ನಂತರ ತನ್ನ ಗಂಡ ಹೊಂದಾಣಿಕೆ ಮಾಡಿಕೊಂಡು ಜೀವನ ಮಾಡೋಣವೆಂದು ಕರೆದಾಗ ಪಿರ್ಯಾದಿದಾರರು ಮತ್ತೆ ತನ್ನ ಗಂಡನಮನೆಗೆ ಹೋದಾಗ ಒಂದುವಾರ ಚೆನ್ನಾಗಿದ್ದು, ನಂತರ ಪಿರ್ಯಾದಿದಾರರಿಂದ ಒಡವೆಗಳನ್ನು ಪಡೆದುಕೊಂಡು, ನಿಮ್ಮ ಮನೆಯಿಂದ ಐದುಲಕ್ಷ ಹಣವನ್ನು ತೆಗೆದುಕೊಂಡು ಬಾ ನಾವು ಪ್ರತ್ಯೇಕವಾಗಿ ಮನೆ ಮಾಡೋಣವೆಂದು ಒತ್ತಡ ಹಾಕಿ, ನಂತರ ಹಣ ನೀಡದಕ್ಕೆ ಪಿರ್ಯಾದಿದಾರರಿಗೆ ತನ್ನ | ತನಿಖೆಯಲ್ಲಿದೆ |

| | | | | |
|---|---|---|---|---|
| | | | ಗಂಡನು ತ್ರಿವಳಿತಲಾಕ್ನೀಡಿ, 2021ನೇ ಸಾಲಿನ ಫೆಬ್ರವರಿ ಮಾಹೆಯಲ್ಲಿ ಮತ್ತೊಂದು ಮದುವೆಯಾಗಿರುತ್ತಾನೆ. ಆದುದರಿಂದ ಆರೋಪಿತರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ನೀಡಿದ ದೂರು ಪಡೆದು ಮೇಲ್ಕಂಡಂತೆ ಪ್ರಕರಣ ಧಾಖಲಿಸಿರುತ್ತೆ. | |
| **ಮಂಡ್ಯ ಜಿಲ್ಲೆ** | | | | |
| 29. | ಮಂಡ್ಯ ಮಹಿಳಾ ಪೊಲೀಸ್ ಠಾಣೆ | ಮೊ.ಸಂ 34/2019 ಕಲಂ: 498(ಎ), 143, 323, 324, 504, 506, 114 ಕೂಡ 149 ಐಪಿಸಿ ಕೂಡ ಕಲಂ 4 ಮುಸ್ಲೀಂ ಮಹಿಳೆಯರ (ವಿವಾಹದ ಹಕ್ಕುಗಳರಕ್ಷಣೆ) ಕಾಯಿದೆ-2019. [Sec: 4 The Muslim Women Protection of Rights on Marriage Act -2019 ] | ಪಿರ್ಯಾದಿಗೆ ದಿನಾಂಕ 03/07/2011 ರಂದು ನಿಜಾಂಖಾನ್ ಎಂಬುವವರೊಡನೆ ವಿವಾಹವಾಗಿರುತ್ತದೆ ನಂತರದ ದಿನಗಳಲ್ಲಿ ಆನಂತರ ನನ್ನ ಗಂಡ ಗಂಡು ಮಕ್ಕಳು ಆಗಿಲ್ಲವೆಂದು ಅವಾಚ್ಯವಾಗಿ ಬೈದು ಕುಲ್ಲಾ ಕೊಡು ಎಂದು ನನ್ನ ಕಪಾಲಕ್ಕೆ ಕೈಯಿಂದ ಹೊಡೆದು ನನ್ನ ಎದೆಯ ಮೇಲೆ ಗುದ್ದಿ ನಿನ್ನನ್ನು ಇಲ್ಲಿಯೇ ಸಾಯಿಸಿ ಬಿಡುತ್ತೇನೆಂದು ಕೊಲೆ ಬೆದರಿಕೆ ಹಾಕಿದ್ದು ಮತ್ತು ಚಾಕುವನ್ನು ಹೊರಗೆ ತೆಗೆದು ಎಡಗೈ ಮಧ್ಯದ ಬೆರಳಿಗೆ ಚಾಕುವಿನಿಂದ ಕುಯ್ದು ರಕ್ತಗಾಯಾವಾಯಿತು ಹಾಗೂ ನನ್ನ ತಂದೆಯ ಭುಜಕ್ಕೆ ಮುಖಕ್ಕೆ ಹೊಡೆದು ರಕ್ತಗಾಯಾವಾಯಿತು ವಿವಾಹದ ಬಗ್ಗೆ ಜೋರಾಗಿ ತಲಾಖ್ ತಲಾಖ್ ಎಂದು 3 ಬಾರಿ ಕೂಗಿ ಹೇಳಿ ತಲಾಖ್ ನೀಡದಿದ್ದರೆ ನಿನ್ನನ್ನು ಸಾಯಿಸುತ್ತೇನೆಂದು ಹೇಳಿದರು ಇದಕ್ಕೆಲ್ಲಾ ನನ್ನ ಮಾವ ಅತ್ತೆ ಗಂಡನ ಅಕ್ಕ ಗಂಡನ ಅಕ್ಕ ಗಂಡನ ಅಣ್ಣ ಕುಮ್ಮಕ್ಕು ನೀಡಿರುತ್ತಾರೆ ಇವರುಗಳ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ದೂರು | ದಿನಾಂಕ: 08/04/2021 ರಂದು ಮಾನ್ಯ ಅಡಿಷನಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ಮಂಡ್ಯ ನ್ಯಾಯಲಯದಲ್ಲಿ ಪಿರ್ಯಾದಿ ಮತ್ತು ಆರೋಪಿಯವರು ರಾಜಿ ಮಾಡಿಕೊಂಡಿದ್ದರಿಂದ ಮಾನ್ಯ ನ್ಯಾಯಲಯವು ಕಲಂ: 248 (1) ಸಿ.ಆರ್.ಪಿ.ಸಿ ರೀತ್ಯಾ ಪ್ರಕರಣವನ್ನು ವಜಾ ಮಾಡಿರುತ್ತದೆ. |
| 30. | ಮಂಡ್ಯ ಮಹಿಳಾ ಪೊಲೀಸ್ ಠಾಣೆ | ಮೊ.ಸಂ 29/2020 ಕಲಂ:498(ಎ), 323, 504 506, 114 ಕೂಡ 34 ಐಪಿಸಿ ಕೂಡ 3 & 4 ಡಿ.ಪಿ.ಆಕ್ಟ್ ಕೂಡ ಕಲಂ 4 ಮುಸ್ಲೀಂ ಮಹಿಳೆಯರ (ವಿವಾಹದ ಹಕ್ಕುಗಳರಕ್ಷಣೆ) ಕಾಯಿದೆ-2019. [Sec: 4 The Muslim Women Protection of Rights on Marriage Act -2019 ] | ಪಿರ್ಯಾದಿಯವರನ್ನು ಆರೋಪಿ 01 ರವರು ಪ್ರೀತಿಸಿ ವಿವಾಹವಾಗಿದ್ದು ನಂತರ ತನಗೆ ಗ್ರ್ಯಾಂಡ್ ಆಗಿ ರಿಷಪ್ಸನ್ ಮಾಡಿಕೊಡಿ ಎಂದು ಒತ್ತಾಯ ಮಾಡಿದ್ದು ಪಿರ್ಯಾದಿಯವರ ತಂದೆ ತಾಯಿ ಇದಕ್ಕೆ ಒಪ್ಪಿ ದಿನಾಂಕ 06/09/20219 ರಂದು ಮೈಸೂರಿನ ಫಾರ್ಚೂನ್ ನಲ್ಲಿ ರಿಷಪ್ಷನ್ ಮಾಡಿಕೊಟ್ಟಿದ್ದು ನಂತರ ಆರೋಪಿ 01 ರವರು ತಾನು ಬಿಜಿನೆಶ ಮಡಲು ಹಣದ ಅವಶ್ಯಕತೆ ಇದ್ದು ಒಂದು ಲಕ್ಷ ರುಫಾಯಿನ್ನು ಪಿರ್ಯಾದಿಯವರ ಪೋಷಕರಿಂದ ಪಡದುಕೊಂಡಿದ್ದು ಪುನಃ ಹಣಕ್ಕೆ ಒತ್ತಾಯ ಮಾಡಿ 50,000/- ರೂ ಹಾಗೂ ಮತ್ತೆ 2,50000/- ರೂಗಳನ್ನು ಪಡೆದುಕೊಂಡಿದ್ದು ನಂತರ ಪಿರ್ಯಾದಿಯವರ ಸುಮಾರು ಐದಾರು ಲಕ್ಷ ಬೆಲೆ ಬಾಳುವ ಒಡವೆಗಳನ್ನು ಸಹ ಪಡೆದುಕೊಂಡಿದ್ದು ಮಾದಕ ವ್ಯಸನಕ್ಕೆ ದಾಸನಾಗಿ ದೈಹಿಕವಾಗಿ ಮಾನಸಿಕವಾಗಿ ದೌರ್ಜನ್ಯ ಎಸಗಿದ್ದು ನಂತರ | ಸದರಿ ಪ್ರಕರಣವು ಮಾನ್ಯ ಅಡಿಷನಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ಮಂಡ್ಯ ನ್ಯಾಯಲಯದಲ್ಲಿ ಸಿಸಿ ನಂಬರ್ 3170/2021 ರಲ್ಲಿ ವಿಚಾರಣೆಯಲ್ಲಿರುತ್ತದೆ |

| | | | | |
|---|---|---|---|---|
| | | | ತನ್ನ ಸ್ನೇಹಿತರಾದ ಆರೋಪಿ 03 ಮತ್ತು 04 ರವರಿಂದ ಬೆದರಿಕೆ ಹಾಕಿಸಿದ್ದು ಆರೋಪಿ 02,03 ಮತ್ತು 06 ರವರು ಸಹ ವರದಕ್ಷಿಣೆ ಹಣಕ್ಕಾಗಿ ಪೀಡಿಸಿ ತಪ್ಪಿದಲ್ಲಿ ಪಿರ್ಯಾದಿಯವರಿಗೆ ತಲಾಕ್ ನೀಡಿ ಬೇರೆ ನಿಖಾ ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ ಇತ್ಯಾದಿಯಾಗಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿರುತ್ತದೆ. | |
| 31. | ಮಂಡ್ಯ ಮಹಿಳಾ ಪೊಲೀಸ್ ಠಾಣೆ | ಮೊ.ಸಂ 37/2020<br>ಕಲಂ: 498(ಎ), 323, 504, 506 ರೆ/ವಿ 34 ಐಪಿಸಿ ಕೂಡ ಕಲಂ 4 The Muslim Women Protection of Rights on Marriage Act -2019 | ಪಿರ್ಯಾದಿಯವರು ದಿನಾಂಕಃ-24-06-2019 ರಂದು ಆರೋಪಿ-1ರವರ ಜೋತೆ ಬೆಳ್ಳೂರಿನ ಉಮ್ಮರ್ ನಗರದ ಮಜೀದ್ ಖಿಮರ್‌ನಲ್ಲಿ ಮದುವೆಯಾಗಿದ್ದು. 2 ತಿಂಗಳುಗಳ ಕಾಲ ಪಿರ್ಯಾದಿಯವರನ್ನು ಚೆನ್ನಾಗಿ ನೋಡಿಕೊಂಡ ಪಿರ್ಯಾದಿಯ ಗಂಡ ಹಾಗೂ ಅವರ ಮನೆಯವರು ಸಣ್ಣ-ಪುಟ್ಟ ವಿಚಾರಕ್ಕೆ ಗಲಾಟೆ ಮಾಡಿ ಅವಾಚವ್ಯ ಶಬ್ದಗಳಿಂದ ನಿಂದಿಸಿ ಕೈಯಿಂದ ಹಲ್ಲೆ ಮಾಡಿ ಆರೋಪಿ-1ರವರಿಂದ ತಲಾಕ್ ಕೊಡಿಸಿ ಬೇರೆ ವಿವಾಹ ಮಾಡುವುದಾಗಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆಂದು ಇತ್ಯಾದಿಯಾಗಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿರುತ್ತದೆ | ಸದರಿ ಪ್ರಕರಣವು ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನಾಗಮಂಗಲ ನ್ಯಾಯಲಯದಲ್ಲಿ ಸಿಸಿ ನಂಬರ್ 216/2021 ರಲ್ಲಿ ವಿಚಾರಣೆಯಲ್ಲಿರುತ್ತದೆ |
| 32. | ಮಂಡ್ಯ ಮಹಿಳಾ ಪೊಲೀಸ್ ಠಾಣೆ | ಮೊ.ಸಂ 08/2021<br>ಕಲಂ-498(ಎ), 323, 504, 506, 114 ರೆ/ವಿ 149 ಐಪಿಸಿ ಮತ್ತು ಕಲಂ 4 The Muslim Women Protection of Rights on Marriage Act -2019 | ಪಿರ್ಯಾದಿರವರು ಆರೋಪಿ1 ರವರನ್ನು 2012 ನೇ ಸಾಲಿನಲ್ಲಿ ಮದುವೆಯಾಗಿದ್ದು, ಕೇವಲ 06 ತಿಂಗಳು ಮಾತ್ರ ಪಿರ್ಯಾದಿರವರನ್ನು ಚೆನ್ನಾಗಿ ನೋಡಿಕೊಂಡಿದ್ದು ನಂತರ ಆರೋಪಿ-1 ರಿಂದ 5 ರವರು ಪಿರ್ಯಾದಿಯವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು, ಕೈಯಿಂದ ಮೈಮೇಲೆ ಹೊಡೆದು, ನಂತರ ಆರೋಪಿ-2 ಮತ್ತು 5 ರವರು ಸಹ ಆರೋಪಿ-1 ರವರಿಗೆ ಕುಮ್ಮಕ್ಕು ನೀಡಿ ಇದರ ಬಗ್ಗೆ ಪಿರ್ಯಾದಿರವರು ಪ್ರಶ್ನಿಸಿದರೆ ಬೈಯುವುದು ಹೊಡೆಯುವುದು ಮಾಡುತ್ತಿದ್ದರು . ಆರೋಪಿ 1 ರವರು ಮನೆಗೆ ಸಾಮಾನುಗಳನ್ನು ತಂದು ಕೊಡದೆ ಬಿಕ್ಷೆ ಬೇಡು ಎಂದು ಪಿರ್ಯಾದಿಯವರಿಗೆ ಗಲಾಟೆ ಮಾಡಿ ಮಾಡಿ ಸಂಜೆಯಾದರು ಮನೆಗೆ ಬಾರದ ಕಾರಣ ಆರೋಪಿ-2ರಿಂದ 5ರವರ ಮನೆಗೆ ಹೋಗಿ ಬಾಗಿಲು ಬಡಿಯಲಾಗಿ ಪಿರ್ಯಾದಿಯವರಿಗೆ ಆರೋಪಿಗಳು ನೀನು ಕಮಿಟಿ ಯವರಿಗೆ ದೂರು ನೀಡಿದ್ದೀಯೆ ಅಲ್ಲಿಯೇ ಹೋಗಿ ಮಲಗಿಕೋ ಎಂದು ಹೇಳಿ ಹಲ್ಲೆ ಮಾಡಿ ಡ್ರೈನೇಜ್ ಗೆ ತಳ್ಳಿ ನಿನ್ನನ್ನು ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆ ಹಾಕಿ ಇಲ್ಲಿಯವರೆವಿಗೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ಕಿರುಕುಳ ನೀಡಿರುತ್ತಾರೆ ಎಂಬಿತ್ಯಾದಿಯಾಗಿ | ಸದರಿ ಪ್ರಕರಣವು ಮಾನ್ಯ ಅಡಿಷನಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ಮಂಡ್ಯ ನ್ಯಾಯಲಯದಲ್ಲಿ ಸಿಸಿ ನಂಬರ್ 9211/2021 ರಲ್ಲಿ ವಿಚಾರಣೆಯಲ್ಲಿರುತ್ತದೆ |

| | | | | |
|---|---|---|---|---|
| | | | ನೀಡಿದ ದೂರನ್ನು ಸ್ವೀಕರಿಸಿಕೊಂಡು ಪ್ರಕರಣವನ್ನು ದಾಖಲಿಸಿರುತ್ತದೆ | |
| 33. | ಮಂಡ್ಯ ಸೆಂಟ್ರಲ್ ಪೊಲೀಸ್ ಠಾಣೆ | CR NO-62/2019 U/S-498[A]-114-323-RW 34 IPC U/S 4 THE MUSLIM WOMEN [PROTECTION OF RAIGHTS ON MARRIAGE ACT 2019 | ಪಿರ್ಯಾದಿಯವರು ಹೀಗ್ಗೆ 14 ವರ್ಷಗಳ ಹಿಂದೆ ನೂರುಲ್ಲಾ ಎಂಬುವವರನ್ನು ಮದುವೆಯಾಗಿದ್ದು 4 ವರ್ಷಗಳ ಕಾಲ ಸುಖವಾಗಿ ಸಂಸಾರ ಮಾಡಿಕೊಂಡಿದ್ದು ನಂತರ ನನ್ನ ಗಂಡ ನೂರುಲ್ಲಾ ಎಂಬುವವರು ನನ್ನ ಅತ್ತೆ ಮಾವ ಹಾಗೂ ಮೈದುನ ಸಲೀಂ ಎಂಬುವವರ ಮಾತನ್ನು ಕೇಳಿಕೊಂಡು ನನಗೆ ಹೊಡೆಯುವುದು, ಬೈಯುವುದು ಮಾಡುವುದು ಮಾಡುತ್ತಿದ್ದು ಇವರು ನನ್ನನ್ನು ಹೆದರಿಸಿ ನನ್ನ ತವರು ಮನೆಗೆ ಕಳುಹಿಸಿದರು. ನಂತರ ದಿನಾಂಕ: 10-08-2019 ರಂದು ನಾನು ನನ್ನ ತವರು ಮನೆಯಲ್ಲಿದ್ದಾಗ ನನ್ನ ಗಂಡ ನೂರುಲ್ಲಾ ಎಂಬುವವರು ಮನೆಯ ಮುಂಭಾಗ ನಿಂತುಕೊಂಡು ತಲಾಖ್ ಎಂದು ಮೂರು ಬಾರಿ ಹೇಳಿ ಹೋದನು. ಈ ಸಂಬಂಧ ಮಸೀದಿಯಲ್ಲಿ ನ್ಯಾಯ ತೀರ್ಮಾನ ಮಾಡಲಾಗಿ ತೀರ್ಮಾನವಾಗದ ಕಾರಣ ಈ ದಿನ ತಡವಾಗಿ ಠಾಣೇಗೆ ಬಂದು ಆರೋಈಪಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಇತ್ಯಾದಿಯಾಗಿ ನೀಡಿದ ದೂರಾಗಿರುತ್ತದೆ. | 2 ನೇ ಅಪರ ಹಿರಿಯ ಸಿವಿಲ್ ಜಡ್ಜ್ ಆಡ್ ಜೆ.ಎಂ.ಎಫ್.ಸಿ ನ್ಯಾಯಾಲಯ ಮಂಡ್ಯ ದಲ್ಲಿ ಸಿಸಿ ನಂ-10/2019 ರಲ್ಲಿ ವಿಚಾರಣೆಯಲ್ಲಿ ಇದ್ದು ಮುಂದಿನ ವಿಚಾರಣೆ ದಿನಾಂಕಃ 10-12-2021 ಆಗಿರುತ್ತದೆ. |
| **ಬೆಳಗಾವಿ ಜಿಲ್ಲೆ.** | | | | |
| 34. | ಸವದತ್ತಿ ಪೊಲೀಸ್ ಠಾಣೆ | ಅಪರಾಧ ಸಂಖ್ಯೆಃ-273/2019 ಕಲಂಃ 4 The Muslim Women Protection of rights on marraige act 2019 | ಇದರಲ್ಲಿಯ ಆರೋಪಿತನು ದಿನಾಂಕ: 02-01-2017 ರಂದು ಪಿರ್ಯಾದಿಯ ಕೂಡಾ ಮುಸ್ಲಿಂ ಧರ್ಮದ ಪ್ರಕಾರ ವಿವಾಹವಾಗಿ ಸುಮಾರು 10 ತಿಂಗಳ ಕಾಲ ಪಿರ್ಯಾದಿಯೊಂದಿಗೆ ಸಂಸಾರ ಮಾಡಿ ನಂತರ ಪಿರ್ಯಾದಿಗೆ ಅನಾರೋಗ್ಯದ ನೆಪವೊಡ್ಡಿ ತವರೂರಿಗೆ ಕಳುಹಿಸಿ ದಿನಾಂಕ: 22-02-2019 ರಂದು ನೊಂದಾಯಿತ ಅಂಚೆ ಮುಖಾಂತರ ತಲಾಕ್-ಎ-ಬಿನ್ ಮೂಲಕ ವಿವಾಹ ವಿಚ್ಛೇದನದ ಜೊತೆಗೆ ತಾನು ಕೊಡತಕ್ಕ ಮಹರ್ ರೂ 11,786/- ಮತ್ತು ಇದ್ದತ್ ಅವಧಿಯ ಮೊತ್ತ ಪ್ರತಿ ತಿಂಗಳು 2000/- ರೂ ನಂತೆ ಒಟ್ಟು 6000/- ರೂ ಹೀಗೆ ಒಟ್ಟು 17,786/- ರೂಗಳನ್ನು ಡಿ.ಡಿ.ಮುಖಾಂತರ ಕಳುಹಿಸಿದ್ದಲ್ಲದೇ ಅದೇ ಪ್ರಕಾರ ಮಾರ್ಚ 2019, ಹಾಗೂ **ದಿನಾಂಕ: 04-05-2019 ರಂದು ಹೀಗೆ ಮೂರು ಬಾರಿ ಕಾನೂನುಬಾಹೀರವಾಗಿ ವಿವಾಹ ವಿಚ್ಛೇದನಕ್ಕಾಗಿ ಅಂಚೆ ಮೂಲಕ ಪತ್ರ ಕಳುಹಿಸಿದ** ಅಪರಾಧ. | ಸಿ.ಸಿ ನಂ: 1250/2019<br><br>ಶಿಕ್ಷೆ:19/12/2020 |
| 35. | AIGALI POLICE STATION | 103/2019 U/S 498(A), R/W 149 IPC & 4 D.P.ACT 1961 & 4 OF THE MUSLIM WOMEN (PROTECTION OF RIGHTS | ಇದರಲ್ಲಿ ನಮೂದ ಮಾಡಿದ ಪಿರ್ಯಾಧಿಯು ಈ ಮುಂಚೆ ಅನಂತಪೂರ ಗ್ರಾಮದ ಶಾನೂರ ಝುರೆ ಈತನ ಸಂಗಡ ಮುಸ್ಲಿಂ ಧರ್ಮದ ಪ್ರಕಾರ ಮದುವೆ ಆಗಿದ್ದು ವೈವಿವಾಹಿಕ ಜೀವನದಲ್ಲಿ ತೊಂದರೆವುಂಟಾಗಿ ತನ್ನ | ಖುಲಾಸೆ<br>ಸಿಸಿ ನಂ:1966/20 |

| | | | | |
|---|---|---|---|---|
| | | ON MARRIAGE) ACT-2019 | ಮೊದಲನೇಯ ಗಂಡನಿಗೆ ಪರಸ್ಪರ ಒಪ್ಪಿಗೆ ಮಾಡಿಕೊಂಡು ಖುಲಾನಾಮಾ ಮಾಡಿ ವಿವಾಹ ವಿಚ್ಚೇಧನೆ ಮಾಡಿಕೊಂಡು ಬೆಂಗಳೂರು ಶಹರದ ಜೆ.ಪಿ.ನಗರದ ಪೋಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಕೆ.ಎಸ್.ಲೇಔಟ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇದರಲ್ಲಿ ನಮೂದ ಮಾಡಿದ ಆರೋಪಿ ನಂ: 1 ಲಾಲಸಾಬ ನಬಿಸಾಬ ಹುಂಡೆಕಾರ ಈತನ ಪರಿಚಯವಾಗಿ ಪ್ರಿತಿಸಿ ರಾಯಚೂರ ಶಹರದ ಜಮಾತದಲ್ಲಿ ಮುಸ್ಲಿಂ ಧರ್ಮದ ಪ್ರಕಾರ ಎರಡನೇಯ ಮದುವೆ ಆಗಿ ಬೆಂಗಳೂರು ಶಹರದ ಜೆ.ಪಿ ನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದು ತದನಂತರ ಪಿರ್ಯಾಧಿಯ ಗಂಡನು ಪಿರ್ಯಾಧಿಯ ಎ.ಟಿ.ಎಮ್.ಕಾರ್ಡ ಹಾಗೂ ಅದರ ಪಿನ್ ನಂಬರ ಪಡೆದುಕೊಂಡು ಪಿರ್ಯಾಧಿಯ ಎಟಿ.ಎಮ್.ದಲ್ಲಿನ ಹಣವನ್ನು ಡ್ರಾ ಮಾಡಿಕೊಂಡು ಪಿರ್ಯಾಧಿಗೆ ಕೈಯಿಂದ ಹೊಡೆ ಬಡೆ ಮಾಡಿ, ಬೂಟ ಗಾಲಿನಿಂದ ಒದ್ದು ಜೀವದ ಬೆದರಿಕೆ ಹಾಕಿದಲ್ಲದೇ, ಪಿರ್ಯಾಧಿಯ ಹತ್ತಿರ ಬಾರದೇ ಹಾಗೂ ಪೋನ ಕರೆಗಳನ್ನು ಸ್ವಿಕರಿಸದೇ ಇದ್ದುದ್ದರಿಂದ ಪಿರ್ಯಾಧಿಯು ತನ್ನ ತವರು ಮನೆಯಾದ ಐಗಳಿ ಗ್ರಾಮಕ್ಕೆ ಬಂದು ತನ್ನ ತಂದೆ ತಾಯಿಗೆ ವಿಷಯ ಹೇಳಿ ಆರೋಪಿತನ ಮನೆಯಾದ ಹತ್ತರಕಿಹಾಳ ಗ್ರಾಮಕ್ಕೆ ಹೋಗಿ ಆರೋಪಿತನ ಮನೆಯ ಜನರಿಗೆ ವಿಚಾರಿಸಲು ಅಲ್ಲಿಯೂ ಬಂದಿರುವುದಿಲ್ಲ ಅಂತಾ ವಿಷಯ ಗೊತ್ತಾಗಿ ಪಿರ್ಯಾಧಿಯು ಮರಳಿ ತನ್ನ ತವರು ಮನೆಗೆ ಬಂದು ಅಲ್ಲಿಂದ ಬೆಂಗಳೂರಿಗೆ ಹೋಗಿ ಆರೋಪಿತನ ಬಗ್ಗೆ ವಿಚಾರಣೆ ಮಾಡಿಕೊಂಡು ಪಿರ್ಯಾಧಿಯು ತನ್ನ ತವರು ಮನೆಗೆ ಬಂದು ಆರೋಪಿತನ ಮನೆಯ ಜನರಿಗೆ ಕರೆಯಿಸಿ ವಿಚಾರಣೆ ಮಾಡಿದ್ದಲ್ಲದೇ ಪಿರ್ಯಾಧಿಯು ತನ್ನ ಗಂಡನ ಮನೆಗೆ ಹೋದಾಗ ಪಿರ್ಯಾಧಿಯ ಗಂಡನ ಮನೆಯಲ್ಲಿ ಅವಳ ಅತ್ತೆ, ಮಾವ ಮತ್ತು ನಾದನಿ ಇವರೆಲ್ಲರೂ ಮನೆಯ ಶೌಚಾಲಯ ಕಟ್ಟುವ ಸಲುವಾಗಿ 1 ಲಕ್ಷ ಹಣ ವರದಕ್ಷಣೆ ತರುವಂತೆ ಬೇಡಿಕೆ ಇಟ್ಟು ಅಲ್ಲಿಂದ ಪಿರ್ಯಾಧಿಗೆ ನಾದಿನಿ ಮನೆಯಾದ ನಂದಿಹಾಳ ಗ್ರಾಮಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಸಹ ಶೌಚಾಲಯ ಕಟ್ಟುವ ಸಲುವಾಗಿ 1 ಲಕ್ಷ ಹಣ ತರುವಂತೆ ಬೇಡಿಕೆ ಇಟ್ಟಿದ್ದರಿಂದ ಅಲ್ಲಿಂದ ಪಿರ್ಯಾಧಿಯು ಬೆಂಗಳೂರಿಗೆ ಹೋಗಿ ಮರಳಿ ತವರು ಮನೆಯಾದ ಐಗಳಿ ಗ್ರಾಮಕ್ಕೆ ಬಂದಾಗ ಆರೋಪಿ ನಂ: 1 ಇವನು ದಿನಾಂಕ: 28-04-2019 ರಂದು ಬೆಳಿಗ್ಗೆ ಪಿರ್ಯಾಧಿಯ ಮನೆಗೆ ಬಂದು ಪಿರ್ಯಾಧಿಗೆ ವಿಜಯಪೂರದಲ್ಲಿ ಪ್ಲಾಟ ಖರೀದಿ ಮಾಡುವುದು ಇರುತ್ತದೆ ನೀನು ವರದಕ್ಷಣೆ ಕೊಟ್ಟಿರುವುದಿಲ್ಲ 5 ಲಕ್ಷ ರೂಪಾಯಿ | |

| | | | | |
|---|---|---|---|---|
| | | | ವರದಕ್ಷಣೆ ಕೊಡಬೇಕು ಅಂತಾ ಬೇಡಿಕೆ ಇಟ್ಟು ತಂಟೆ ಮಾಡಿ ಪಿರ್ಯಾಧಿಯ ತಂದೆ ತಾಯಿ ಹಾಗೂ ಮಾವನ ಮುಂದೆ ಅರೋಪಿತನು **ಪಿರ್ಯಾಧಿಗೆ "ರೇಶ್ಮಾ ಮೈ ತುಜೆ ತಲಾಖ ದೇತಾ ಹುಂ, "ರೇಶ್ಮಾ ಮೈ ತುಜೆ ತಲಾಖ ದೇತಾ ಹುಂ, "ರೇಶ್ಮಾ ಮೈ ತುಜೆ ತಲಾಖ ದೇತಾ ಹುಂ, ಅಂತಾ ಮೂರು ಬಾರಿ ತಲಾಖ ಅಂದು** ಪಿರ್ಯಾಧಿಯ ಮನೆಯಿಂದ ಹೇಳಿ ಹೋಗಿದ್ದಲ್ಲದೇ ಇನ್ನೂಳಿದ ಆರೋಪಿತರು ಪಿರ್ಯಾಧಿಯ ಗಂಡನಿಗೆ ಕುಮ್ಮಕ್ಕು ನೀಡಿ ದೈಹಿಕ ಮತ್ತು ಮಾನಸಿಕವಾಗಿ ಕಿರುಕಳಕೊಟ್ಟ ಅಪರಾಧ | |
| 36. | ಚಿಕ್ಕೋಡಿ 182/2020 ಕಲಂ 4 ದಿ ಮುಸ್ಲಿಂ ವುಮೆನ್ ಕಾಯ್ದೆ 2019 | | ಇದರಲ್ಲಿ ಆರೋಪಿತನು ಪಿರ್ಯಾದಿಯ ಗಂಡನಿದ್ದು ಇವರಿಬ್ಬರು ಸನ್ 2014 ನೇ ಸಾಲಿನಲ್ಲಿ ಮುಸ್ಲಿಂ ಧರ್ಮದ ಪ್ರಕಾರ ವಿವಾಹ ಮಾಡಿಕೊಂಡಿದ್ದು ಇಬ್ಬರೂ ವೈವಾಹಿಕ ಜೀವನ ನಡೆಸಿ ಎರಡು ಹೆಣ್ಣು ಮಕ್ಕಳಿಗೆ ಜನ್ಮ ನೀಡಿದ್ದು ನಂತರದ ದಿನಗಳಲ್ಲಿ ಪಿರ್ಯಾದಿಗೆ ನೀನು ಗಂಡು ಮಗನಿಗೆ ಜನ್ಮ ಕೊಟ್ಟಿಲ್ಲಾ ಅಂತಾ ತೊಂದರೆ ತ್ರಾಸ ಕೊಟ್ಟು ಎರಡು ಸಣ್ಣ ಮಕ್ಕಳನ್ನು ತನ್ನ ವಶಕ್ಕೆ ತೆಗೆದುಕೊಂಡು ಪಿರ್ಯಾದಿಯನ್ನು ಅವಳ ತವರು ಮನೆಗೆ ಕಳುಹಿಸಿಕೊಟ್ಟು ಇನ್ನೊಂದು ವಿವಾಹ ಮಾಡಿಕೊಳ್ಳುವ ಉದ್ದೇಶದಿಂದ ಪಿರ್ಯಾದಿಗೆ ದಿನಾಂಕ 04/01/2020, 05/02/2020 ಹಾಗೂ 07/10/2020 ರಂದು ಹೀಗೆ ಒಟ್ಟು ಮೂರು ಬಾರಿ ನೋಟಿಸಗಳನ್ನು **ಟ್ರೇಪಲ್ ತಲಾಕ್ ಅಂತಾ ರಜಿಸ್ಟರ್ ಪೋಸ್ಟ ಮುಖಾಂತರ ಕಳುಹಿಸಿಕೊಟ್ಟ** ಅಪರಾಧ. | ಸಿಸಿ ನಂ. 387/2021 ದಿನಾಂಕ 02/02/2022 ರಂದು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. |
| 37. | ಘಟಪ್ರಭಾ | ಅಪರಾಧ ಸಂಖ್ಯೆ : 236/2019 **ಕಾನೂನಿನ ಪ್ರಕರಣ :** IPC 1860 U/s 498(ಎ), 323, 504, 342, 494, 34 The Muslim Women(Protection of Rights on Marriage) Act 2019 U/s 4, DOWRY PROHIBITION ACT, 1961 U/s 3, 4, | ಇದರಲ್ಲಿ ನಮೂದ ಮಾಡಿದ ಆರೋಪಿ ನಂ 01 ಇವನು ಪಿರ್ಯಾದಿಯ ಗಂಡ ಹಾಗೂ ಅರೋಪಿ ನಂ 02 03 ಇವರು ಮಾವ ಅತ್ತೆ ಇದ್ದು ಸದರಿಯವರು ಮೂಡಲಗಿಯಲ್ಲಿ ಗಂಡನ ಮನೆಯಲ್ಲಿ ಪಿರ್ಯಾದಿಗೆ ತವರು ಮನೆಯಿಂದಾ ಹಣ ಹಾಗೂ ಬಂಗಾರ ತೆಗೆದುಕೊಂಡು ಬಾ ಅಂತಾ ಹೊಡಿಬಡಿ ಮಾಡಿ ಮನೆಯಲ್ಲಿ ಕೂಡಿ ಹಾಕಿ ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಟ್ಟು ಆರೋಪಿ ನಂ 01 ಇವನು ಆರೋಪಿ ನಂ 04 ಇವಳ ಜೋತೆ ಎರಡನೆ ಮದುವೆ ಮಾಡಿಕೊಂಡಿದ್ದು ನಂತರ ಪಿರ್ಯಾದಿಯು ತನ್ನ ತವರು ಮನೆಯಾದ ಸಂಗನಕೇರಿಗೆ ಬಂದಾಗ ಆರೋಪಿ ನಂ 01 ಇವನು ಸಂಗನಕೇರಿಗೆ ಬಂದು **ಪಿರ್ಯಾದಿಗೆ ತಲಾಕ ಅಂತಾ ಮೂರು ಸಲಾ ಹೇಳಿ** ತನ್ನ ಮಕ್ಕಳಿಗೆ ಕರೆದುಕೊಂಡು ಹೋದ ಅಪರಾಧ | ಸಿಸಿ ನಂಬರ–990/2021 ರಡಿಯಲ್ಲಿ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. |

**ಚಿಕ್ಕಮಗಳೂರು ಜಿಲ್ಲೆ**

| | | | | |
|---|---|---|---|---|
| 38. | ಚಿಕ್ಕಮಗಳೂರು ಮಹಿಳಾ ಠಾಣೆ | CR NO 10/2021 ಕಲಂ: 498(ಎ), 504, 307, 354(ಎ), 323, 504, 324, 506, 34 ಐಪಿಸಿ, 3 ಮತ್ತು 4 ಡಿ.ಪಿ.ಆಕ್ಟ್ ಸಹಿತ The Muslim Women ( Protection of rights on marriage ) Act 2019 . | ನನ್ನ ವಿವಾಹವು ದಿನಾಂಕ : 05/08/2019 ರಂದು ಸಂಬಂದಿಕರ ಹಿರಿಯರ ಮತ್ತು ಸ್ನೇಹಿತರ ಸಮ್ಮುಖದಲ್ಲಿ ರಿಜ್ವಾನ್ ಹುಸೇನ್ ರವರೊಂದಿಗೆ ಮಂಗಳೂರಿನ ಮಿಲಾಗ್ರಿಸ್ ಹಾಲ್ ನಲ್ಲಿ ನಡೆದಿರುತ್ತದೆ. ನನ್ನ ಗಂಡ ರಿಜ್ವಾನ್ ಹುಸೇನ್ ಸೌದಿ ಅರೇಬಿಯಾದಲ್ಲಿ ವ್ಯಾಪಾರ ವ್ಯವಹಾರ ನಡೆಸುತ್ತಿದ್ದಾರೆ. ಮದುವೆಯಾದ ಮರುದಿನದಿಂದ ಗಂಡ ರಿಜ್ವಾನ್ ಹುಸೇನ್ ಆತನ ತಂದೆ ಕೆ.ಮಹಮದ್, ತಾಯಿ ಆಯೇಶಾ, ಆತನ ಅಕ್ಕ ಮಮ್ರಾಜ್, ಹಾಗೂ ಆತನ ಅಕ್ಕನ ಮಕ್ಕಳಾದ ಆರ್ಶಿಯಾ ಮತ್ತು ಆಲಿಯಾ ಇವರುಗಳು ನನಗೆ ದೈಹಿಕ ಹಲ್ಲೆ, ಹಿಂಸೆ, ಕಿರುಕುಳ ಕೊಡಲು ಆರಂಭಿಸಿರುತ್ತಾರೆ. ಮದುವೆಯಾಗುವ ಮೊದಲು ನನ್ನ ತಂದೆ ವರದಕ್ಷಿಣೆ ಚಿನ್ನ ಹಾಗೂ ಇತರೆ ಯಾವುದಾದರೂ ಬೇಡಿಕೆ ಇದೆಯಾ ಎಂದು ಕೇಳಿದಾಗ ಯಾವುದೇ ಬೇಡಿಕೆ ಇರುವುದಿಲ್ಲ ಹುಡುಗಿಯನ್ನು ಮದುವೆ ಮಾಡಿಕೊಡಿ ಸಾಕು ಎಂದು ತಿಳಿಸಿದ್ದರು. ಆದರೂ ಮದುವೆ ಸಮಯದಲ್ಲಿ 800 ಗ್ರಾಂ ಚಿನ್ನ, ವಜ್ರ ಹಾಗೂ ಮುತ್ತಿನ ಆಭರಣಗಳನ್ನು ಹಾಗೂ ಸುಮಾರು ರೂ. 1.00.000/- ಮೊತ್ತದ ಸೀರೆ ಮತ್ತು ಡ್ರೆಸ್ ಗಳನ್ನು ನನ್ನ ತಂದೆ ತಾಯಿರವರು ಕೊಡಿಸಿರುತ್ತಾರೆ. ಅಲ್ಲದೇ ನನ್ನ ಗಂಡ ರಿಜ್ವಾನ್ ಹುಸೇನ್ ನಿಗೆ ರೂ. 67.000/- ರೆಡೋ ವಾಚ್ ಕೊಡುಗೆಯಾಗಿ ಕೊಟ್ಟಿರುತ್ತಾರೆ.ಆದರೆ ನನ್ನ ಗಂಡ ಹಾಗೂ ಅವರ ತಂದೆ, ತಾಯಿ, ಅಕ್ಕ, ಅಕ್ಕನ ಮಕ್ಕಳು ಕೊಟ್ಟಿರುವ ಆಭರಣ ಸಾಲುವುದಿಲ್ಲ. ಅಂಟಿಕ್ ಡಿಸೈನ್ ಅಲ್ಲ, ಸೊಂಟದ ಪಟ್ಟಿ, ಕಾಲಿನ ಚೈನ್ ದಪ್ಪ ಇಲ್ಲ. ಎಂದು ಹೇಳಿ ಕಿರುಕುಳ ಕೊಡಲು ಆರಂಭಿಸಿದರು. ಬೇರೆ ದಪ್ಪದ ಚಿನ್ನದ ಸೊಂಟ ಪಟ್ಟಿ ಕಾಲಿನಚೈನ್ ಕೊಡಬೇಕೆಂದು ಒತ್ತಾಯಿಸಿದರು. ಅಂಟಿಕ್ ಡಿಸೈನ್ ಇರುವ ಕತ್ತಿನ ಸರ ಕೊಡಬೇಕೆಂದು ಒತ್ತಾಯಿಸಿದರು. ಊಟ ಸರಿಯಾಗಿ ಕೊಡುತ್ತಿರಲಿಲ್ಲ. ನನ್ನ ಗಂಡ, ಆತನ ತಂದೆ, ತಾಯಿ, ಆತನ ಅಕ್ಕ ಇವರುಗಳು ನನಗೆ ಹೊಡೆಯುವುದು,ಅವಾಚ್ಯ ಶಬ್ಧಗಳಿಂದ ಸೂಳೆ ಮುಂಡೆ, ಹಾದರಕ್ಕೆ ಹುಟ್ಟಿದವಳು ಎಂದು ಬೈಯ್ಯುವುದು ಹಾಗೂ ದೈಹಿಕವಾಗಿ ಹಲ್ಲೆ | ನ್ಯಾಯಾಲಯದ ವಿಚಾರಣೆಯಲ್ಲಿರುತ್ತೆ. |

| | | | | |
|---|---|---|---|---|
| | | | ನಡೆಸುತ್ತಿದ್ದರು. ನಾನು ಇದನ್ನುಅನುಭಪಿಸಿ ಸುಮ್ಮನಿದ್ದರೂ ಕೂಡ ರಿಜ್ವಾನ್ ಹುಸೇನ್ ಮತ್ತು ಆತನ ಅಕ್ಕ ನಿನ್ನ ತಂದೆ ಹೇಳಿದ್ದನ್ನು ಹಾಕಿ ಕಳುಹಿಸಿಲ್ಲ. ನೀನು ಕಷ್ಟವನ್ನು ಅನುಭವಿಸಬೇಕು ಎಂದು ಹೇಳಿ ನನ್ನ ಕುತ್ತಿಗೆಯನ್ನು ಹಿಸುಕಿ ನೀನು ಬದುಕಬಾರದು ಎಂದು ಹೇಳಿ ನನ್ನನ್ನು ಕೊಲ್ಲಲು ಪ್ರಯತ್ನಿಸಿರುತ್ತಾರೆ. ನನ್ನ ಅತ್ತೆ ಮಾವನವರು ನನ್ನ ಗಂಡ ಮತ್ತು ನಾದಿನಿಗೆ ನನ್ನನ್ನು ಕೊಲ್ಲು ಇನ್ನೊಂದು ಹುಡುಗಿ ಸಿಗುತ್ತದೆ ಎಂದು ಹೇಳಿ ಅವರಿಗೆ ಬೆಂಬಲಿಸಿದರು. ಆಗ ಅತಿಥಿಗಳು ಬಂದ ಕಾರಣ ನನ್ನನ್ನು ಬಿಟ್ಟರು. ಅಲ್ಲದೆ ನೀನು ತವರು ಮನೆಗೆ ಹೋಗು ಇನ್ನೊಮ್ಮೆ ಇಲ್ಲಿಗೆ ಬಂದರೆ ಕೊಲ್ಲದೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ,. ನನ್ನ ಗಂಡನ ಅಕ್ಕನ ಮಕ್ಕಳಾದ ಆರ್ಶಿಯ ಮತ್ತು ಆಲಿಯಾ ಬಂದು ನಿನ್ನ ಚಿನ್ನದ ಕಲರ್ ಚೆನ್ನಾಗಿಲ್ಲ ಆಂಟಿಕ್ ಡಿಸೈನ್ ತೆಗೆದುಕೊಳ್ಳಬೇಕಿತ್ತು ಇಂತಹದ್ದೆಲ್ಲಾ ಹಾಕಿಕೊಂಡು ಯಾಕೆ ಬಂದೆ ನಿನ್ನ ಮುಖಕ್ಕೆ ಶ್ರೀಮಂತ ಕುಟುಂಬದವರು ಎಂದು ಹೇಳಿಕೊಂಡು ಬಂದಿದ್ದೀಯಾ ಎಂದು ಹೇಳಿ ಹೊಡೆಯಲು ಬಂದಿರುತ್ತಾರೆ. ದಿನಾಂಕ:12/08/2019 ರಂದು ಮತ್ತು24/08/2019 ರಂದು ಎರಡು ಬಾರಿ ನಾನು ನನ್ನ ಗಂಡನೊಂದಿಗೆ ತವರು ಮನೆಗೆ ಬಂದಿದ್ದು ತಲಾ ಒಂದು ದಿವಸ ತವರು ಮನೆಯಲ್ಲಿದ್ದು ವಾಪಸ್ಸು ಗಂಡನ ಮನೆಗೆ ಹೋಗಿದ್ದೆ. ಗಂಡನ ಮನೆಯಲ್ಲಿ ದಿನಾಂಕ:17/08/2019 ರವರೆಗೆ ಇದ್ದೆ. ನನ್ನ ಗಂಡ ವಾಪಸ್ಸು 17/08/2019 ರಂದು ವಾಪಸ್ಸು ಸೌದಿ ಅರೇಬಿಯಾಕ್ಕೆ ಹೋದಾಗ ನನ್ನ ತಂದೆ ತಾಯಿ ರವರು ನನ್ನನ್ನು ತವರು ಮನೆಗೆ ಕರೆದುಕೊಂಡು ಬಂದರು. ನನ್ನ ಗಂಡ ಸೌದಿಅರೇಬಿಯಾಕ್ಕೆ ಹೋದ ನಂತರ ತನ್ನ ತಾಯಿಗೆ ಫೋನ್ ಮಾಡಿಲ್ಲ ಎಂದು ಸುಳ್ಳು ನೆಪ ತೆಗೆದುಕೊಂಡು ಫೋನಿನಲ್ಲಿ ಗಲಾಟೆ ಮಾಡುತ್ತಿದ್ದು ದಿನಾಂಕ : 04/10/2019 ರಂದು ನನ್ನ ತಂದೆಗೆ ಫೋನ್ ಮಾಡಿ ನಿಮ್ಮ ಮಗಳ ಬುದ್ಧಿ ನಡತೆ ಸರಿ ಇರಲಿಲ್ಲ ಅವಳನ್ನು ಕೂಡಲೇ ಆತನ ಮನೆಗೆ ಕಳುಹಿಸಲು ಹೇಳಿದ.ಆಕೆ ಗರ್ಭಿಣಿ ಪ್ರಯಾಣ ಮಾಡಬಾರದು ಎಂದು ವೈದ್ಯರು ತಿಳಿಸಿರುತ್ತಾರೆ. ಆಗ ಆಕೆಯನ್ನು ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಆತನ ಕೃಷ್ಣಾಪುರಕ್ಕೆ ಹೋಗಿ ಬಿಟ್ಟು ಬನ್ನಿ ಎಂದು ತಿಳಿಸಿದ. ಇಲ್ಲದಿದ್ದಲ್ಲಿ ವಿವಾಹ ವಿಚ್ಚೇಧನ ತನಕ ಹೋಗಬಹುದು | |

| | | | | |
|---|---|---|---|---|
| | | | ಎಂದು ಬೆದರಿಸಿದ್ದ. ಆದರೆ ನನ್ನ ತಂದೆಯವರು ಬ್ಲಾಕ್ ಮೇಲ್ ಮಾಡಬೇಡ ವೈದ್ಯರು ತಿಳಿಸಿದ ಕಾರಣದಿಂದ ಈಗಲೇ ಕೃಷ್ಣಾಪುರಕ್ಕೆ ಬಿಟ್ಟುಬರಲು ಸಾಧ್ಯವಿಲ್ಲ ಎಂದು ಹೇಳಿದರು. ದಿನಾಂಕ : 17/10/2019 ರಂದು ನನ್ನ ತಂದೆಗೆ ಫೋನ್ ಮಾಡಿ ನನ್ನ ತಂದೆಯೊಂದಿಗೆ ನನ್ನನ್ನು ಮತ್ತು ನನ್ನ ತಾಯಿಯನ್ನು ಸೂಳೆ ಎಂದು ಹಾಗೂ ಇತರೆ ಕೆಟ್ಟ ಶಬ್ಧಗಳನ್ನುಉಪಯೋಗಿಸಿ ಬೈದಿರುತ್ತಾರೆ. ಕೊಲೆ ಬೆದರಿಕೆ ಹಾಕಿರುತ್ತಾರೆ. ದಿನಾಂಕ: 21/10/2019 ರಂದು ಕೆಟ್ಟದಾಗಿ ಬೈಯ್ದು ತಂದೆಯ ಫೋಟೋ ಹಾಕಿ ಮೊಯ್ದಿನ್ ಅಕ್ಬರ್ ರವರ ಮೊಬೈಲ್ ಫೋನಿಗೆ ಸ್ಟೇಟಸ್ ಹಾಕಿರುತ್ತಾರೆ. ಮೊಯ್ದಿನ್ ಅಕ್ಬರ್ ಗೆ ಫೋನ್ ಮಾಡಿ ನನ್ನ ನಡೆತೆ ಸರಿ ಇಲ್ಲ ಎಂದು ಹೇಳಿ ಮಾನಸಿಕ ಹಿಂಸೆ ನೀಡಿರುತ್ತಾನೆ. ಗಂಡನ ಮನೆಯಿಂದ ತವರು ಮನೆಯಲ್ಲಿ 9 ತಿಂಗಳು ಇದ್ದು ದಿ: 01/07/2020 ರಂದು ನನ್ನ ಗಂಡ, ಗಂಡನ ತಂದೆ, ತಾಯಿ ಮಗಳು ಮಮ್ತಾಜ್, ಮಮ್ತಾಜ್ ಗಂಡ ಸಮ್ಮದ್ ಚಿಕ್ಕಮಗಳೂರಿಗೆ ಬಂದು ಪಂಚಾಯತಿ ನಡೆಸಿ ಅವರುಗಳು ಮಾಡಿದ ತಪ್ಪನ್ನು ಮನ್ನಿಸಿ ಎಂದು ಕೇಳಿಕೊಂಡು ಇನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂದು ಭರವಸೆ ನೀಡಿ ದಿನಾಂಕ:02/07/2020 ರಂದು ಗಂಡನ ಮನೆಗೆ ಕರೆದುಕೊಂಡು ಹೋದರು. ದಿನಾಂಕ: 13/12/2020 ರಂದು ನನ್ನ ತಾಯಿಯ ಅಕ್ಕನ ಮಗನ ಗೃಹಪ್ರವೇಶಕ್ಕೆ ಮಂಗಳೂರಿಗೆ ಬಂದು ಅಲ್ಲಿಂದ ನನ್ನ ತವರು ಮನೆಗೆ ಬಂದಿರುತ್ತೇನೆ. ನಾನು ದಿನಾಂಕ:02/07/2020 ರಿಂದ ನನ್ನ ಗಂಡನ ಮನೆಗೆ ಹೋದ ನಂತರ ಪುನಃ ನನ್ನ ಗಂಡ, ಆತನ ತಂದೆ, ತಾಯಿ, ಅಕ್ಕ, ಅವರ ಮಕ್ಕಳು ಕಿರುಕುಳ ಕೊಡುವುದನ್ನು ಮುಂದುವರೆಸಿದರು. ಈ ಹಿಂದೆ ಕೊಡುತ್ತಿದ್ದ ಹಾಗೆ ಕಿರುಕುಳ ನೀಡಿ ನನ್ನ ತವರು ಮನೆಯವರು ನನಗೆ ಹಾಕಿರುವ ಆಭರಣಗಳನ್ನು ಹಾಕಿಕೊಳ್ಳಲು ಕೇಳಿದರೆ ಕೊಡುತ್ತಿರಲಿಲ್ಲ. ವಿನಾಕಾರಣ ಹೊಡೆಯುವುದು, ಬಡಿಯುವುದು, ಅವಾಚ್ಯವಾಗಿ ಬೈಯ್ಯುವುದು, ಕೊಲೆ ಮಾಡುತ್ತೇನೆಂದು ಬೆದರಿಕೆ ಒಡ್ಡುವುದು ತಂದೆ ತಾಯಿಗಳಿಗೆ ಬೈಯ್ಯುವುದು ಮಾಡುತ್ತಿದ್ದರು. ನಾನು ನನ್ನ ಗಂಡನ | |

| | | | | |
|---|---|---|---|---|
| | | | ಮನೆಯಲ್ಲಿ ಇದ್ದಷ್ಟು ಕಾಲ ನನ್ನ ಗಂಡನ ತಂದೆಯಾದ ಮಹಮ್ಮದ್ ರವರು ನನಗೆ ಲೈಂಗಿಕ ಕಿರುಕುಳ ಕೊಡುತ್ತಿದ್ದರು. ಅಂದರೆ ಅನಾವಶ್ಯಕವಾಗಿ ಸ್ಪರ್ಶಿಸುವುದು. ನಿನ್ನ ಡ್ರೆಸ್ ಚೆನ್ನಾಗಿಲ್ಲ. ನಾನು ಹೇಳಿದ ಹಾಗೆ ಡ್ರೆಸ್ ಹಾಕಬೇಕು ಎಂದು ಹೇಳಿ ನಾನು ನಮಾಜ್ ಮಾಡುವಾಗ ಹಿಂದೆ ಬಂದು ನಿಲ್ಲುವುದು ಮಾಡುತ್ತಿದ್ದನು. ಅಲ್ಲದೆ ಅನಾವಶ್ಯಕವಾಗಿ ಮಾತನಾಡಲು ಪ್ರಯತ್ನಿಸುತ್ತಿದ್ದನು. ಇದನ್ನು ನನ್ನ ಗಂಡನಿಗೆ ಹೇಳಿದರೂ ಆತ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದೆ ಮೌನವಾಗಿರುತ್ತಿದ್ದ. ದಿನಾಂಕ:26/12/2020 ರಂದು ನನ್ನ ಗಂಡ ರಿಜ್ವಾನ್ ಹುಸೇನ್, ಅವರ ತಂದೆ ಮಹಮ್ಮದ್ ಮತ್ತು ನನ್ನ ಗಂಡನ ಚಿಕ್ಕಪ್ಪ ಉಸ್ಮಾನ್ ಇವರುಗಳು ಬಂದು ಪಂಚಾಯತಿ ಮಾಡುತ್ತೇವೆ ಎಂದು ಹೇಳಿ ಗಲಾಟೆ ಮಾಡಿ ನನಗೆ ತ್ರಿವಳಿ ತಲಾಕ್ ಹೇಳಿ ಹೋಗಿರುತ್ತಾರೆ. ನನ್ನ ಗಂಡ ತ್ರಿವಳಿ ತಲಾಕ್ ಹೇಳಲು ಮೇಲ್ಕಂಡ ನನ್ನ ಗಂಡನ ತಂದೆ, ಗಂಡನ ಚಿಕ್ಕಪ್ಪ ಉಸ್ಮಾನ್ ಇವರುಗಳ ಕುಮ್ಮಕ್ಕಿನಿಂದ ನನ್ನ ಗಂಡ ನನಗೆ ತ್ರಿವಳಿ ತಲಾಕ್ ಹೇಳಿ ಹೋಗಿರುತ್ತಾರೆ. ಆ ಸಮಯದಲ್ಲಿ ನನ್ನ ದೊಡ್ಡಪ್ಪಇದ್ದಿನಬ್ಬ ಹಾಗೂ ಚಿಕ್ಕಪ್ಪ ಅಬ್ದುಲ್ ಖಾದ ರ್ ನಮ್ಮಮನೆಯಲ್ಲಿದ್ದರು. ಆದ್ದರಿಂದ ಗಂಡ ರಿಜ್ವಾನ್ ಹುಸೇನ್, ಆತನ ತಂದೆ ಕೆ.ಮಹಮ್ಮದ್, ತಾಯಿ ಆಯೇಶಾ,ನಾದಿನಿ ಮುಮ್ತಾಜ್, ಮತ್ತು ಮಕ್ಕಳಾದ ಆರ್ಶಿಯಾ ಮತ್ತು ಆಲಿಯಾ ರವರುಗಳನ್ನು ಠಾಣೆಗೆ ಕರೆಯಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. | |
| 39. | ಚಿಕ್ಕಮಗಳೂರು ಮಹಿಳಾ ಠಾಣೆ | CR NO CR NO 58-2021 US 143,147,498(A)323,324,307, 506,109 RW 149 IPC 3&4 DP ACT 04 OF THE MUSLIM WOMEN (PROTECTION OF RIGHTS | ದಿನಾಂಕ: 02-07-2021 ರಂದು 20-30 ಗಂಟೆಗೆ ಪಿರ್ಯಾದುದಾರಾದ ಶ್ರೀಮತಿ ಸುಮಯ್ಯ ತರನುಂ ಕೋಂ ಮೊಹಮ್ಮದ್ ಅಜಾಂ, 34 ವರ್ಷ, ಗೃಹಿಣಿ ವಾಸ: ಬಾರ ಲೈನ್ ರೋಡ್ ಚಿಕ್ಕಮಗಳೂರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಸಾರಾಂಶವೇನೆಂದರೆ ಹಿರಿಯರ ಸಮ್ಮುಖದಲ್ಲಿ ನನ್ನ ಮತ್ತು ಮೊಹಮ್ಮದ್ ಅಜಂ ಮದುವೆ ಡಿಸೆಂಬರ್ 21 - 2003 ರಲ್ಲಿ ಅಜಾಂ ಶಾದಿ ಮಹಲ್ ಚಿಕ್ಕಮಗಳೂರಿನಲ್ಲಿ ನಡೆದಿತ್ತು ಮದುವೆ | ತನಿಖೆಯಲ್ಲಿರುತ್ತೆ |

| | | | | |
|---|---|---|---|---|
| | | ON MARREGE) ACT 2019 | ಸಮಯದಲ್ಲಿ ನನ್ನ ಗಂಡನ ತಂದೆ ಹಾಗೂ ಅವನ ತಾಯಿ ಮತ್ತು ಗಂಡನ ಅಣ್ಣಂದಿರು ಅಕ್ಕಂದಿರು ಅವರು ಕೇಳಿದ ವರದಕ್ಷಿಣೆ ಪ್ರಕಾರ 150 ಗ್ರಾಂ ಚಿನ್ನ ಹಾಗೂ 45,000 ರೂ ನಗದು ಹಾಗೂ ಮನೆಯ ಸಾಮಾನುಗಳು ಹಾಗೂ 01 ಸೈಟ್ ಮತ್ತು ಸುಮಾರು ಅಂದಾಜು 15 ಲಕ್ಷಗಳನ್ನು ಖರ್ಚು ಮಾಡಿ ಮದುವೆಯನ್ನು ಮಾಡಿಕೊಟ್ಟಿದ್ದರು ಮದುವೆಯಾದ 01 ತಿಂಗಳ ನಂತರ ನನ್ನ ಗಂಡನ ಅಣ್ಣನ ಮಗ ಮರಣ ಹೊಂದಿದ ಕಾರಣ ನನ್ನ ಕಾಲು ಗುಣ ಚೆನ್ನಾಗಿಲ್ಲವೆಂದು ನನಗೆ ಮಾನಸಿಕವಾಗಿ ಕಿರುಕುಳ ಕೊಟ್ಟರು ನಂತರ 01 ವರ್ಷದ ಒಳಗೆ ನನ್ನ ಗಂಡನ ತಮ್ಮ ಮುಬಾರಕ್ ತೀರಿ ಹೋದ ಕಾರಣ ನನ್ನನ್ನು ದರಿದ್ರ ವೆಂದು ಹೊಡೆದು ಬಡಿದು ಮನೆಯಿಂದ ಹೋಗು ಎಂದು ಕಿರುಕುಳವನ್ನು ಕೊಟ್ಟರು ನಂತರ ದೊಡ್ಡವರೆಲ್ಲ ಸೇರಿ ರಾಜಿ ಪಂಚಾಯ್ತಿ ಮಾಡಿ ನನ್ನ ಗಂಡನಿಗೆ ಬುದ್ದಿ ಹೇಳಿ ಕಳುಹಿಸುವಾಗ 50,000/- ಹಣ ಕೊಡಿ ಎಂದು ರಾಜಿ ಆಗಿದ್ದರು ನಂತರ ನನಗೆ ಮನೆ ಕಟ್ಟಲು ಹಣದ ಅವಶ್ಯಕತೆ ಇದೆ ನಿನ್ನ ತಂದೆ ಮನೆಯಿಂದ ಹಣ ತೆಗೆದುಕೊಂಡು ಬಾ ಎಂದು ಡಿಮ್ಯಾಂಡ್ ಮಾಡಿದರು ನನಗೆ 07 ವರ್ಷ ಮಕ್ಕಳು ಇಲ್ಲದ ಕಾರಣ ನನ್ನ ಗಂಡನಿಗೆ ಬೇರೆ ಮದುವೆ ಮಾಡುತ್ತೇವೆಂದು ವಿವಾಹ ವಿಚ್ಛೇದನ ಕೊಡುವಂತೆ ಮಾನಸಿಕ ದೈಹಿಕ ಕಿರುಕುಳ ಕೊಟ್ಟಿರುತ್ತಾರೆ. ನಂತರ ನನಗೆ 02 ಗಂಡು ಮಕ್ಕಳು ಆದವು ವಿಚ್ಛೇದನ ಕೊಡದ್ದಿದ್ದ ಕಾರಣ ನನ್ನ ಡೆಲಿವರಿಯ ಯಾವುದೇ ಖರ್ಚು ವೆಚ್ಚ ಭರಿಸಿರುವುದಿಲ್ಲ ಮದುವೆ ಸಮಯದಲ್ಲಿ ಕೊಟ್ಟ ನಿವೇಶನವನ್ನು ಗಂಡನ ಹೆಸರಿಗೆ ರಿಜಿಸ್ಟರ್ ಮಾಡಿಕೊಂಡಿರುತ್ತಾರೆ. 2013 ರಲ್ಲಿ ನನ್ನ ಗಂಡನಿಗೆ ಕಿಡ್ನಿ ತೊಂದರೆಯಿಂದ ಶಸ್ತ್ರ ಚಿಕಿತ್ಸೆ ಯಾಗಿದ್ದು ಅದಕ್ಕೆ ನನ್ನ ಕಾಲುಗುಣ ಸರಿ ಇಲ್ಲ ಎಂದು ಮಾನಸಿಕ ದೈಹಿಕ ಕಿರುಕುಳ ಕೊಟ್ಟು ಮನೆಯಿಂದ ಹೊರಹಾಕಿರುತ್ತಾರೆ. ನೀನು ನಮಗೆ ಇಷ್ಟವಿಲ್ಲ ನನಗೆ ಬೇರೆಯವರ ಜೊತೆ ಸಂಭಂದ ಇದೆ ನನಗೆ ತಲಾಕ್ ಕೊಡು ಎಂದು ಕಿರುಕುಳವನ್ನು ಕೊಟ್ಟರು 2017 ರಲ್ಲಿ ನನ್ನ ಗಂಡ ನನಗೆ ನೀನು ಬೇಡ ಎಂದು ಹೇಳಿದರು ಆರೋಪಿಗಳೆಲ್ಲಾ ಸೇರಿ ದೈಹಿಕ ಕಿರುಕುಳ ನೀಡಿದರು 2019 ರಲ್ಲಿ ಆರೋಪಿಗಳು ಎಲ್ಲರೂ ಸೇರಿ ಪ್ಲಾಸ್ಟಿಕ್ ಚೇರಿನಿಂದ | |

| | | | | |
|---|---|---|---|---|
| | | | ಹೊಡೆದು ನಿನ್ನ ಮನೆಯಿಂದ 25 ಲಕ್ಷ ರೂ ತೆಗೆದುಕೊಂಡು ಬಾ ಎಂದು ಮನೆಯಿಂದ ಕಳುಹಿಸಿದರು ನನಗೆ ಮಾನಸಿಕ ಕಿರುಕುಳಕೊಟ್ಟು ನನಗೆ ಆಸ್ಪತ್ರೆಗೆ ತೋರಿಸದೆ ನನ್ನ ಮನೆಯವರನ್ನು ಕರೆಸಿ ಇವಳನ್ನು ನಮ್ಮ ಮನೆಯಿಂದ ಕರೆದುಕೊಂಡು ಹೋಗಿ ನನಗೆ ತಲಾಕ್ ಕೊಡಿಸಿ ಇಲ್ಲದಿದ್ದರೆ ನಾನು ಇವಳನ್ನುಸಾಯಿಸುತ್ತೇನೆ ಎಂದು ಹಿಂಸೆ ಮಾಡಿದರು ಆರೋಪಿತರು ಮತ್ತು ಅವರ ಸಂಬಧಿಕರು ಆಗಾಗ ಹಣ ತೆಗೆದುಕೊಂಡು ಇಲ್ಲವಾದರೆ ತಲಾಕ್ ಕೊಡು ಎಂದು ಬೆದರಿಸುತ್ತಿದ್ದರು. ದಿನಾಂಕ:16-05-2021 ರ ಬೆಳಿಗ್ಗೆ 10-30 ರಿಂದ11-30 ಸಮಯದಲ್ಲಿ ಫೋನಿನಲ್ಲಿ 03 ಬಾರಿ ತಲಾಕ್ ಹೇಳಿರುತ್ತಾರೆ. ನಂತರ ನನ್ನ ಗಂಡ ನಾಜನಿನ್ ಎಂಬ ಹುಡುಗಿಯನ್ನು ಮದುವೆಯಾಗಿರುವುದು ನನಗೆ ತಿಳಿದಿರುತ್ತದೆ. ನಂತರ ನಾನು ಗಂಡನ ಮನೆಗೆ ಹೋಗಿದ್ದಾಗ ಆರೋಪಿತರೆಲ್ಲರೂ ಸೇರಿ ಅವಾಚ್ಯವಾಗಿ ನಿಂದಿಸಿ ಹಲ್ಲೆ ಮಾಡಿ ನನ್ನ ಕುತ್ತಿಗೆ ಹಿಸುಕಿ ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ. ನನ್ನ ಗಂಡನ ಎರಡನೆ ಪತ್ನಿ ಹಾಗೂ ಅವರ ಸಂಬಂಧಿಕರೆಲ್ಲರೂ ಸೇರಿ ನಾನು ಕಾನೂನು ಕ್ರಮ ಜರುಗಿಸಿಬಾರದೆಂದು ಬೆದರಿಕೆ ಹಾಕಿರುತ್ತಾರೆ.ಇವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳ ಬೇಕೆಂದು ಕೋರಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊ ನಂ: 58/2021 US 143,147,498(A)323,324,307,506,109 RW 149 IPC 3&4 DP ACT 04 OF THE MUSLIM WOMEN (PROTECTION OF RIGHTS ON MARREGE) ACT 2019 ರೀತ್ಯಾ ಪ್ರಕರಣ ದಾಖಲಿಸಿರುತ್ತೆ . | |
| **ಉಡುಪಿ ಜಿಲ್ಲೆ** | | | | |
| 40. | ಕುಂದಾಪುರ ಪೊಲೀಸ್ ಠಾಣೆ. | ಅ.ಕ್ರ. 126/2019 ಕಲಂ 498 ( ಎ) 323, 504, 506 109 ಜತೆಗೆ 34 ಐಪಿಸಿ ಮತ್ತು | ಶ್ರೀಮತಿ ಅಲ್ಪಿಯಾ ಅಖ್ತರ್ 27 ವರ್ಷ ತಂದೆ ಖಾಸಿಂ ಸಾಹೇಬ್ ಮೂಡುಗೋಪಾಡಿ ಇವರು ದಿನಾಂಕ 04/07/2019 ರಂದು ಹಿರಿಯಡ್ಕದ ಹನೀಫ್ ಸೈಯದ್ ತಂದೆ ಸೈಯದ್ ಅಬ್ಬಾಸ್‌ನನ್ನು ಮದುವೆಯಾಗಿದ್ದು ಮದುವೆಯ ಪೂರ್ವದಲ್ಲಿ ಅಪಾದಿತರು ಒತ್ತಾಯ | ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿ ಇರುತ್ತದೆ. |

| | | | | |
|---|---|---|---|---|
| | | ಕಲಂ 4 The Muslim Woman (Protection Of Right on Marriage) Act 2019 | ಮಾಡಿ 2 ಲಕ್ಷ ಹಣವನ್ನು ಪಡೆದುಕೊಂಡಿದ್ದು ಮದುವೆಯ ಬಳಿಕ ವೈವಾಹಿಕ ಮನೆಯಲ್ಲಿ ವಿನಾಕಾರಣ ಪಿರ್ಯಾದಿ ಶ್ರೀಮತಿ ಅಲ್ವಿಯಾ ಅಖ್ತರ್‌ರವರಿಗೆ ಕೈಯಿಂದ ಹೊಡೆದು ಬೈದು, ಸರಿಯಾಗಿ ಊಟ ನೀಡದೇ ಇದ್ದು ದಿನಾಂಕ 15/08/2019ರಂದು ಬೆಳಿಗ್ಗೆ 00.35 ಗಂಟೆಗೆ ಅಪಾದಿತ ಹನೀಫ್ ಸೈಯದ್ ಪತ್ನಿ ಶ್ರಿಮತಿ ಅಲ್ವಿಯಾ ಅಖ್ತರ್‌ಗೆ ಮೂರು ಬಾರಿ ತಲಾಕ್ ತಲಾಕ್ ತಲಾಕ್ ಎಂದು ಹೇಳಿ ವೈವಾಹಿಕ ಮನೆಯಿಂದ ಹೊರಹಾಕಿರುವುದಾಗಿದೆ. | |
| 41. | ಮಹಿಳಾ ಠಾಣೆ | ಅಕ್ರ: 41/2019<br>ಕಲಂ: The Muslim Women (Protection of Rights on Marriage) Act, 2019 U/s 4 ; IPC 1860 U/s 506, 498A, 323, 342 ) | ಪಿರ್ಯಾದಿದಾರರ ಮತ್ತು ಆರೋಪಿಯ ವಿವಾಹವು ದಿನಾಂಕ 22/02/2000 ರಂದು ಬಜ್ಪೆಯ ಪೆರ್ಮುದೆ ಮಸೀದಿಯ ಎ.ಜೆ.ಎಂ ಹಾಲ್‌ನಲ್ಲಿ ಮುಸ್ಲಿಂ ಸಂಪ್ರದಾಯದಂತೆ ನಡೆದಿರುತ್ತದೆ. ಪಿರ್ಯಾದಿದಾರರ ಮತ್ತು ಆರೋಪಿಯ ವೈವಾಹಿಕ ಜೀವನದಲ್ಲಿ 3 ಜನ ಮಕ್ಕಳು ಜನಿಸಿರುತ್ತಾರೆ. ಮದುವೆಯಾಗಿದ್ದ ಸಮಯದಿಂದ ಆರೋಪಿ ಪಿರ್ಯಾದಿದಾರರಿಗೆ ನಿರಂತರ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದು, ಪಿರ್ಯಾದಿದಾರರು ಮಕ್ಕಳಿಗೋಸ್ಕರ ಸಹಿಸಿಕೊಂಡು ಇರುತ್ತಾರೆ. ಪ್ರಸ್ತುತ ಸುಮಾರು 7 ವರ್ಷದಿಂದ ಪಿರ್ಯಾದಿದಾರರು, ಆರೋಪಿ ಹಾಗೂ ಅವರ ಮಕ್ಕಳು ಮಣಿಪಾಲದ ಇಂದ್ರಾಳಿಯ ಮಾರ್ಸ್‌ಓರಿಯನ್ ಅಪಾರ್ಟ್‌ಮೆಂಟಿನಲ್ಲಿ ವಾಸಮಾಡಿಕೊಂಡಿದ್ದು, ಅಲ್ಲಿಯೂ ಕೂಡ ಆರೋಪಿ ಪಿರ್ಯಾದಿದಾದರಿಗೆ ತನಗೆ ವಿಚ್ಚೇದನೆ ನೀಡುವಂತೆ ಒತ್ತಾಯಿಸಿ ಪಿರ್ಯದಿದಾರರಿಗೆ ಮತ್ತು ಅವರ ಮಕ್ಕಳಿಗೆ ನಿರಂತರ ಹಲ್ಲೆ ನಡೆಸಿ, ಪಿರ್ಯಾದಿದಾರನ್ನು ರೂಂನಲ್ಲಿ ಕೂಡಿಹಾಕಿ ಹಿಂಸೆನೀಡುತ್ತಿದ್ದರು. ಈ ಬಗ್ಗೆ ದೂರು ನೀಡಿದ್ದಲ್ಲಿ ಕೊಲ್ಲುವುದಾಗಿ ಜೀವಬೆದರಿಕೆಹಾಕಿರುತ್ತಾರೆ. ಆರೋಪಿಯು 2019 ನೇ ಮಾರ್ಚ್ ತಿಂಗಳ ಕೊನೆಯಲ್ಲಿ ಪಿರ್ಯಾದಿದಾರರನ್ನು ಹಾಗೂ ಅವರ ಮಕ್ಕಳನ್ನು ಬಿಟ್ಟು ಹೋಗಿ ಪ್ರತ್ಯೇಕವಾಸವಿದ್ದು, ದಿನಾಂಕ 16/09/2019 ರಂದು ಬೆಳಗ್ಗೆ ಸುಮಾರು 11:30 ಗಂಟೆಗೆ ಇಂದ್ರಾಳಿ ದೇವಸ್ಥಾನ ರಸ್ತೆಯಲ್ಲಿ ಪಿರ್ಯಾದಿದಾರರು ನಡೆದುಕೊಂಡು ಬರುವಾಗ ಆರೋಪಿ ತಾನು ಬೇರೆ ಮದುವೆಯಾಗುತ್ತೇನೆ ಎಂದು ಹೇಳಿ ರಸ್ತೆಯ ಮಧ್ಯದಲ್ಲಿ ಪಿರ್ಯಾದಿದಾರರಲ್ಲಿ ಕಾನೂನುಬಾಹಿರವಾಗಿ ತಲಾಖ್ ತಲಾಖ್ ತಲಾಖ್ ಎಂದು ಮೂರು ಬಾರಿ ಹೇಳಿ ಕೊಲೆ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂಬಿತ್ಯಾದಿಯಾಗಿ ಪಿರ್ಯಾದಿದಾರರು ನೀಡಿದ ದೂರಿನ ಸಾರಾಂಶವಾಗಿರುತ್ತದೆ. | ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿ ಇರುತ್ತದೆ. |
| 42. | ಮಹಿಳಾ ಠಾಣೆ | ಅಕ್ರ: 47/2019<br>ಕಲಂ: (IPC 1860 U/s 498A, 354(A), 323, 504, 506, 34, 354(A) | ಪಿರ್ಯಾದಿದಾರರ ಮತ್ತು ಆರೋಪಿ ಒಂದನೇಯ ವರವಿವಾಹವು ದಿನಾಂಕ 20/05/1997ರಂದು ಮಂಗಳೂರಿನ ಕುದ್ರೋಳಿಯ ಮಸೀದಿಯಲ್ಲಿ ಮುಸ್ಲಿಂ ಸಂಪ್ರದಾಯದಂತೆ ನಡೆದಿರುತ್ತದೆ. ಪಿರ್ಯಾದಿದಾರರ ಮತ್ತು ಆರೋಪಿ 1 ನೇಯವರ ವೈವಾಹಿಕಜೀವನದಲ್ಲಿ 2 ಜನಮಕ್ಕಳು ಜನಿಸಿರುತ್ತಾರೆ. ಮದುವೆಯಾಗಿದ್ದ ಸಮಯದಿಂದ ಆರೋಪಿ ಪಿರ್ಯಾದಿದಾರರಿಗೆ ನಿರಂತರ | ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿ ಇರುತ್ತದೆ. |

| | | | | |
|---|---|---|---|---|
| | | (2), 324, 417 ; The Muslim Women (Protection of Rights on Marriage) Act, 2019 U/s 4 ) | ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದು, ಆರೋಪಿ 2 ನೇಯವರು ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಮನೆಗೆ ಬಂದು ಪಿರ್ಯಾದುದಾರರಿಗೆ ಲೈಂಗಿಕ ತೃಪ್ತಿಯನ್ನು ಕೊಡುತ್ತೇನೆ ಎಂದು ಹೇಳಿ ದೇಹಕ್ಕೆ ಕೈ ಹಾಕಿ ಲೈಂಗಿಕ ಕಿರುಕುಳ ನೀಡಿರುತ್ತಾನೆ. ಈ ವಿಷಯವನ್ನು ಪಿರ್ಯಾದುದಾರರು ಆರೋಪಿ 1 ನೇ ಯವರಿಗೆ ತಿಳಿಸಿದಾಗ, ಆರೋಪಿ 1 ನೇ ಯವರು ನಿನ್ನ ನಡತೆ ಸರಿ ಇಲ್ಲ ಎಂದು ಹೇಳಿ, ಕುಡಿದು ಬಂದು ತನ್ನ ಪ್ಯಾಂಟಿನ ಬೆಲ್ಟ್ ತೆಗೆದು ಪಿರ್ಯಾದುದಾರರಿಗೆ ಬೆನ್ನಿಗೆ ಹೊಡೆದಿರುತ್ತಾರೆ. ದಿನಾಂಕ: 17/11/2019 ರಂದು ಬೆಳಿಗ್ಗೆ ಸುಮಾರು 09:30 ಗಂಟೆಗೆ ಆರೋಪಿ 1 ನೇಯವರು ಮನೆಗೆ ಬಂದಾಗ ಪಿರ್ಯಾದಿದಾರರು ಆರೋಪಿ 1 ನೇಯವರನ್ನು ನೀವು ಹತ್ತು ದಿವಸ ಎಲ್ಲಿಗೆ ಹೋಗಿದ್ದೀರಿ ಎಂದು ಕೇಳಿದಾಗ ಆರೋಪಿ 1 ನೇಯವರು ನಾನು ಸಮೀನಾಳ ಮನೆಗೆ ಹೋಗಿರುತ್ತೇನೆ. ನಾನು ಸಮೀನಾಳನ್ನು ಮದುವೆಯಾಗಿದ್ದೇನೆ ಎಂದು ಕಾನೂನು ಬಾಹಿರವಾಗಿ ತಲಾಖ್ ತಲಾಖ್ ತಲಾಖ್ ಎಂದು ಮೂರು ಬಾರಿ ಹೇಳಿ ಅವಾಚ್ಯ ಶಬ್ದಗಳಿಂದ ಬೈದು ಕೊಲೆಬೆದರಿಕೆ ಹಾಕಿರುತ್ತಾನೆ ಎಂಬಿತ್ಯಾದಿ. | |
| 43. | ಶಿರ್ವ ಠಾಣೆ | ಅಕ್ರ 60/2020, ಕಲಂ 4 The Muslim women (Protection of rights on marrage) act 2019 | ಈ ಪ್ರಕರಣದ ಸಾರಾಂಶವೇನೆಂದರೆ ಪಿರ್ಯಾದಿದಾರರು ದಿನಾಂಕ 23/09/2010 ರಂದು ಅಪಾದಿತನೊಂದಿಗೆ ಶಿರ್ವಾದಲ್ಲಿ ಮದುವೆಯಾಗಿದ್ದು, ಪ್ರಸ್ತುತ ಪಿರ್ಯಾದಿದಾರರು ಮಗಳು ಅನಾಸ್ ಮತ್ತು ಅಪಾದಿತನೊಂದಿಗೆ ವಿದೇಶವಾದ ಸೌದಿ ಅರೇಬಿಯಾದ ದಮ್ಮಾಮ್ ಎಂಬಲ್ಲಿ ವಾಸ ಮಾಡಿಕೊಂಡಿದ್ದು, ಅಪಾದಿತನು ಪಿರ್ಯಾದಿದಾರರನ್ನು ಮತ್ತು ಮಗಳನ್ನು ಬಿಟ್ಟು ವಿದೇಶದಿಂದ ಇನ್ನೊಂದು ಮಹಿಳೆಯೊಂದಿಗೆ ದಿನಾಂಕ 03/08/2020 ರಂದು ಮುಂಬೈಗೆ ಬಂದಿದ್ದು, ನಂತರ ಅಪಾದಿತನು ತನ್ನ ಆಪಲ್ ಕಂಪೆನಿಯ ಮೊಬೈಲಿನ ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್ ಪ್ರೋಫೈಲಿನಲ್ಲಿ ಪಿರ್ಯಾದಿದಾರರನ್ನು ಉದ್ದೇಶಿಸಿ ಟ್ರಿಪ್ಪಲ್ ತಲಾಖ್ ಎಂಬುದಾಗಿ ಸಂದೇಶವನ್ನು ಅಫ್ ಲೋಡ್ ಮಾಡಿರುವುದಾಗಿದೆ. | ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿ ಇರುತ್ತದೆ. |
| **ಉತ್ತರ ಕನ್ನಡ ಜಿಲ್ಲೆ** | | | | |
| 44. | ಶಿರಸಿ ಹೊಸಮಾರುಕಟ್ಟೆ ಪೊಲೀಸ್ ಠಾಣೆ | 124/2019 ಕಲಂ 448(ಎ). 448. 323.504.506(2) ಐ.ಪಿ.ಸಿ. & ಕಲಂ 4 ಡಿ.ಪಿ. ಆ್ಯಕ್ಟ & ಕಲಂ 4 The Muslim Women Protection Of Rights On Marriage Act-2019 | ಆರೋಪಿತನು ಕಳೆದ 20/04/2008 ರಲ್ಲಿ ಫಿರ್ಯಾದಿಯೊಂದಿಗೆ ಮುಸ್ಲಿಂ ಸಂಪ್ರದಾಯದಂತೆ ಮದುವೆಯಾಗಿದ್ದು, ಮದುವೆಯಾದ ನಂತರ ಗಂಡನೊಂದಿಗೆ ಗಂಡನ ಮನೆಯಲ್ಲಿ ವಾಸವಾಗಿದ್ದವಳಗೆ. ಆರೋಪಿತನು ಕೆಲವು ದಿನ ಚೆನ್ನಾಗಿ ನೋಡಿಕೊಂಡು ಬಂದವನು. ನಂತರದಲ್ಲಿ ನಿಮ್ಮ ತವರು ಮನೆಯವರು ನನಗೆ 35.000/- ರೂಪಾಯಿಗಳು ಮಾತ್ರ ವರದಕ್ಷಿಣೆಯನ್ನು ಕೊಟ್ಟಿದ್ದು ಇನ್ನು ಹೆಚ್ಚಿನ ಹಣ ಬೇಕು ಅಂತಾ ಪಿಡಿಸಿ ಫಿರ್ಯಾದಿ ತವರು ಮನೆಯವರಿಂದ ಫ್ರಿಜ್ ವಾಸಿಂಗ ಮಸೀನ್ ಇತ್ಯಾದಿ ಗೃಹೋಪಯೋಗಿ ವಸ್ತುಗಳನ್ನು ಪಡೆದು ಇನ್ನು ಹಣ ಮತ್ತು ವಸ್ತುಗಳು ತರಲು ಫಿರ್ಯಾದಿಗೆ | ವಿಚಾರಣೆಯಲ್ಲಿರು ತ್ತದೆ. |

| | | | | |
|---|---|---|---|---|
| | | | ಪಿಡಿಸುತ್ತಾ ಬಂದು, ಆರೋಪಿತನು ತಿರ್ಥಳ್ಳಿಯ ರಜಿಯಾ ಎಂಬ ಹೆಂಗಸಿನೊಂದಿಗೆ ಅಕ್ರಮ ಸಂಬಂದವನ್ನು ಇಟ್ಟುಕೊಂಡು ಬಂದಿದ್ದು ಇದನ್ನು ಕೇಳದಾಗ ಫಿರ್ಯಾದಿಗೆ ತಲಾಕ ನೀಡುತ್ತೆನೆ ಅಂತಾ ಹೆದರಿಸುತ್ತಾ ಬಂದಿದ್ದು ಈ ವಿಷಯ ತವರು ಮನೆಯವರಿಗೆ ತಿಳಿಸಿ ತವರು ಮನೆಯವರು ಮಗಳನ್ನು ನೋಡಲು ಬಂದಾಗ ಅವರಿಗೆ ಸರಿಯಾಗಿ ಉಟಕ್ಕೆ ನೀಡದೇ ಅಮಾನವಿಯತೆ ತೋರಿಸಿ ಅವರ ಎದುರಿನಲ್ಲಿ ಮನೆಯಿಂದ ಎಳೆದು ಹೊರಗೆ ಹಾಕುವುದು ಮಾಡುತ್ತಾ ಬಂದವನು ದಿನಾಂಕ 20/08/2019 ರಂದು ಫಿರ್ಯಾದಿಯನ್ನು ಮನೆಯಿಂದ ಎಳೆದು ಹೊರಗೆ ಹಾಕಿದ್ದು, ಫಿರ್ಯಾದಿಯು ತನ್ನ ಅಜ್ಜಿ ಮನೆಯಾದ ಶಿರಸಿ ಮುಸ್ಲಿಂಗಲ್ಲಿಯಲ್ಲಿ ಬಂದು ವಾಸವಾಗಿರುವಾಗ ದಿನಾಂಕ 24/09/2019 ರಂದು ಸಂಜೆ 18-00 ಘಂಟೆಗೆ ಆರೋಪಿತನು ಫಿರ್ಯಾದಿ ವಾಸವಿರುವ ಮನೆಗೆ ಅಕ್ರಮ ಪ್ರವೇಶ ಮಾಡಿ, ಕೈಯಿಂದ ಹೊಡೆದು ಎಳೆದು ದೂಡಾಡಿ, ನನ್ನ ಜೊತೆ ಬರದಿದ್ದರೆ ನಿನಗೆ ಕೊಲೆ ಮಾಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿ ತಲಾಕ ತಲಾಕ ತಲಾಕ ಎಂದು ತ್ರಿವಳಿ ತಲಾಕ ನೀಡಿ ಅಪರಾದ ಎಸಗಿದ್ದು ಆರೋಪಿತನ ವಿರುದ್ಧ ಕಲಂ 498(ಎ), 447, 504, 506, 494 ಐ.ಪಿ.ಸಿ. & 3, 4 ಡಿ.ಪಿ. ಎಕ್ಟ ನೇದ್ದರಂತೆ ಶಿಕ್ಷೆ ವಿಧಿಸಬೇಕು ಅಂತಾ ಮಾನ್ಯ ನ್ಯಾಯಾಲಯದಿಂದ ಬಂದ ಖಾಸಗಿ ದೂರು ಸಾರಾಂಶ. | |
| 45. | ಶಿರಸಿ ಹೊಸ ಮಾರುಕಟ್ಟೆ ಪೊಲೀಸ್ ಠಾಣೆ | 83/2020 ಕಲಂ: 498(ಎ), 323, 506 ಸಹಿತ 149 ಐ.ಪಿ.ಸಿ ಮತ್ತು ಕಲಂ: 3, 4 ವರದಕ್ಷಿಣಾ ನಿಷೇಧ ಕಾಯ್ದೆ ಮತ್ತು ಕಲಂ 4 The Muslim Women (protection of rights on marriage) Act 2019 | ಫಿರ್ಯಾದಿಯವರ ಮದುವೆಯೂ ಆರೋಪಿ ನಂ 01 ನೇಯವನೊಂದಿಗೆ 11-04-2018 ರಂದು ಗುರು-ಹಿರಿಯರ ಸಮಕ್ಷಮ ಕಸ್ತೂರಾಬಾನಗರದ ಮಸಜೀದ್-ಇ-ರೆಹಮತಿಯಾ ಮಸಿದಿಯಲ್ಲಿ ನಡೆದಿದ್ದು, ನಂತರ ಫಿರ್ಯಾದಿ ತನ್ನ ಗಂಡನ ಮನೆಗೆ ಹೋಗಿ ಸಂಸಾರ ನಡೆಸುತ್ತಿರುವಾಗ ಆರೋಪಿ 01 ನೇಯವನು ಫಿರ್ಯಾದಿಗೆ ತಾನು ಸ್ವಂತ ಬ್ಯೂಸಿನೆಸ್ ಅಥವಾ ವೆಲ್ಡಿಂಗ್ ಗ್ಯಾರೇಜ್ ಮಾಡುತ್ತೇನೆ ನಿನ್ನ ತವರು ಮನೆಯಿಂದ ಹಣವನ್ನು ತೆಗೆದುಕೊಂಡು ಬಾ ಅಂತಾ ಪೀಡಿಸಿತೊಡಗಿದ್ದು ಆಗ ಫಿರ್ಯಾದಿ ತನ್ನ ತಂದೆಯವರ ಕಡೆಯಿಂದ 2,00,000/- (ಎರಡು ಲಕ್ಷ) ರೂಪಾಯಿ ಹಣವನ್ನು ಗ್ಯಾರೇಜ್ ಮಾಡಲು ತಂದುಕೊಟ್ಟಿದ್ದು ತದನಂತರ ಇನ್ನೂ ಹಣವನ್ನು ತವರು ಮನೆಯಿಂದ ತೆಗೆದುಕೊಂಡು ಬರುವಂತೆ ಒತ್ತಾಯಿಸಿದ್ದು ಅದಕ್ಕೆ ಫಿರ್ಯಾದಿ ಒಪ್ಪದಿದ್ದಾಗ ಆರೋಪಿ 01 ನೇಯವನು ಫಿರ್ಯಾದಿಗೆ ಹೊಡೆ ಬಡೆ ಮಾಡುತ್ತಿದ್ದು ಅದಕ್ಕೆ ಇತರ ಆರೋಪಿತರು ಆರೋಪಿ 01 ನೇಯವನಿಗೆ ಪ್ರೋತ್ಸಾಹ ನೀಡುತ್ತಾ ಫಿರ್ಯಾದಿಗೆ ತವರು ಮನೆಯಿಂದ ಹಣವನ್ನು ತರುವಂತೆ ಒತ್ತಾಯಿಸುತ್ತಿದ್ದರು. ಅಲ್ಲದೇ ಫಿರ್ಯಾದಿ ಗಂಡ ಕೆಲಸಕ್ಕೆ ಹೋದಾಗ ಇತರ ಆರೋಪಿತರು ಫಿರ್ಯಾದಿಗೆ ಅವಳು ಮಾಡಿದ ಕೆಲಸ ಸರಿಯಾಗಿಲ್ಲಾ ಅಂತಾ ಒಂದಲ್ಲಾ ಒಂದು ಕಾರಣ ಹೇಳಿ ಹೊಡೆ ಬಡೆ ಮಾಡುತ್ತಿದ್ದು, ಫಿರ್ಯಾದಿ ಗಂಡ ಕೆಲಸ ಮುಗಿಸಿ ಮನೆಗೆ | ವಿಚಾರಣೆಯಲ್ಲಿರುತ್ತದೆ. |

| | | | | |
|---|---|---|---|---|
| | | | ಬಂದಾಗ ಫಿರ್ಯಾದಿ ವಿರುದ್ಧ ಇಲ್ಲಸಲ್ಲದ ಸುಳ್ಳು ಹೇಳಿ ಹೊಡೆಬಡೆ ಮಾಡಿಸುತ್ತಾ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಾ ಬಂದಿದ್ದು ಫಿರ್ಯಾದಿ ಈ ವಿಷಯವನ್ನು ತನ್ನ ತವರು ಮನೆಗೆ ಹೇಳಿದಾಗ ಫಿರ್ಯಾದಿ ತಂದೆ ಮತ್ತು ಅಣ್ಣ ಫಿರ್ಯಾದಿ ಮನೆಗೆ ಬಂದು ಆರೋಪಿ 01ನೇಯವನಾದ ಫಿರ್ಯಾದಿ ಗಂಡನಿಗೆ ಬುದ್ಧಿಮಾತು ಹೇಳಿ ಫಿರ್ಯಾದಿಗೆ ಗಂಡನ ಮನೆಯಲ್ಲಿಯೇ ಉಳಿಸಿ ಹೋಗುತ್ತಿದ್ದರು. ಆದರೂ ಆರೋಪಿತರು ತಮ್ಮ ನಡುವಳಿಕೆಯನ್ನು ಸುಧಾರಣೆ ಮಾಡಿಕೊಳ್ಳದೇ ಫಿರ್ಯಾದಿಗೆ ಇನ್ನೂ ಹೆಚ್ಚಿನ ಕಿರುಕುಳ ನೀಡುತ್ತಿದ್ದರಿಂದ ಫಿರ್ಯಾದಿ ತಂದೆಯವರು ಜಮಾತಿಗೆ ವಿಷಯ ತಿಳಿಸಿದ್ದು ಜಮಾತಿನಲ್ಲಿ ರಾಜಿ ಪಂಚಾಯತಿ ಮಾಡಿದ್ದು ಹೀಗಿರುವಾಗ ಫಿರ್ಯಾದಿಯವರು ಬಕ್ರೀದ ಹಬ್ಬಕ್ಕೆ ತವರು ಮನೆಗೆ ಬಂದವಳು ಹಬ್ಬ ಮುಗಿಸಿ ದಿ: 03-08-2020 ರಂದು ಮದ್ಯಾಹ್ನ 14:00 ಗಂಟೆಗೆ ತನ್ನ ಅಣ್ಣನ ಜೊತೆಯಲ್ಲಿ ತನ್ನ ಗಂಡನ ಮನೆಗೆ ಹೋದಾಗ ಆರೋಪಿ 01 ನೇಯವನು ಕತ್ತಿಯನ್ನು ಹಿಡಿದುಕೊಂಡು ಫಿರ್ಯಾದಿ ಮತ್ತು ಫಿರ್ಯಾದಿ ಅಣ್ಣನನ್ನು ಉದ್ದೇಶಿಸಿ ಮನೆಯ ಒಳಗೆ ಬಂದರೆ ಇಬ್ಬರನ್ನು ಕಡಿದು ಹಾಕುತ್ತೇನೆ ಅಂತಾ ಧಮಕಿ ಹಾಕಿದ್ದಲ್ಲದೇ ಆ ವೇಳೆಗೆ ಇತರ ಆರೋಪಿತರು ಸಹ ಅಲ್ಲಿಗೆ ಬಂದು ಫಿರ್ಯಾದಿ ಮತ್ತು ಫಿರ್ಯಾದಿ ಅಣ್ಣನಿಗೆ ಹೊಡೆಯಲು ಬಂದಾಗ ರಫಿಕ್ ಮರ್ದನ್ ಸಾಬ್ ಕಲ್ಲಂಗಡಿ ಮತ್ತು ಶ್ರೀಮತಿ ಸಾಹೀರಾಬಾನು ಮಹ್ಮದ ಶಫೀ ಕೆರೆಕೊಪ್ಪ ಹಾಗೂ ಇತರರು ಬಂದು ತಪ್ಪಿಸಿದ್ದು ಆಗ ಆರೋಪಿ 01 ನೇಯವನು ಫಿರ್ಯಾದಿಯನ್ನು ಉದ್ದೇಶಿಸಿ ಇಂದಿನಿಂದ ನೀನು ನನ್ನ ಹೆಂಡತಿಯಲ್ಲಾ ನಿನಗೆ ತಲಾಕ್ ನೀಡುತ್ತಿದ್ದೇನೆ ತಲಾಕ್, ತಲಾಕ್, ತಲಾಕ್ ಎಂದು ತ್ರೀವಳಿ ತಲಾಕ್ ನೀಡಿ, ಇಲ್ಲಿ ಒಂದು ನಿಮಿಷವು ನಿಲ್ಲಬೇಡಿ ಕೂಡಲೇ ಹೋಗಿ ಇಲ್ಲದಿದ್ದರೇ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿದ್ದು ಆರೋಪಿತರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಫಿರ್ಯಾದಿ ಠಾಣೆಯಲ್ಲಿ ಹಾಜರಾಗಿ ನೀಡಿದ ಲಿಖಿತ ದೂರಿನ ಸಾರಾಂಶ. | |
| 46. | ಯಲ್ಲಾಪುರ ಪೋಲೀಸ್ ಠಾಣೆ | 199/2020 ಕಲಂ : 3.4, D.P.Act & 04 The Muslim women Protection of rights on marriage Act 2019 & 498(A), 354, 109, 120, 323, 324, 504, 506, 307 R/w 149 .I.P.C. | ನಮೂದಾದ ಎ-1 ನೇಯವನು ಪಿರ್ಯಾದಿ ಗಂಡನಿದ್ದು. ಎ-.2.ನೇಯವನು ಪಿರ್ಯಾದಿ ಮಾವ , ಎ-3 ನೇಯವರು ಪಿರ್ಯಾದಿಯ ಅತ್ತೆ, ಎ-4 ಫಿರ್ಯಾದಿಯ ನಾದಿನಿ, ಎ-5 ಫಿರ್ಯಾದಿಯ ನಾದಿನಿ ಗಂಡ, ಎ-6 ಫಿರ್ಯಾದಿಯ ಮಾವನ ಎರಡನೇಯ ಹೆಂಡತಿ, ಎ-7 ಫಿರ್ಯಾದಿಯ ಗಂಡನ ಎರಡನೇಯ ಹೆಂಡತಿ ರವರಾಗಿದ್ದು ಎ-1 ನೇಯವರು ಪಿರ್ಯಾದಿಯವರನ್ನು ದಿನಾಂಕ 16-04-2007 ರಂದು ಮುಸ್ಲಿಂ ಧರ್ಮದ ಪದ್ಧತಿಯಂತೆ ಅಂಕೋಲಾ ಶಾದಿಮಹಲ್‌ದಲ್ಲಿ | ತಡೆಯಾಜ್ಞೆ ಯಲ್ಲಿರುತ್ತದೆ. |

| | | | | |
|---|---|---|---|---|
| | | | ಮದುವೆಯಾಗಿ ತನ್ನ ಮನೆ ಯಲ್ಲಾಪೂರಕ್ಕೆ ಕರೆದುಕೊಂಡು ಬಂದು ಎರಡು ತಿಂಗಳ ವರೆಗೆ ಚೆನ್ನಾಗಿ ಸಂಸಾರ ಮಾಡಿಕೊಂಡಿದ್ದವನು. ತದ ನಂತರ ಫಿರ್ಯಾದಿಯವರು ಮನೆಯ ಮುಂದೆ ಕುಳಿತರೆ, ಪರಪುರಷರೊಂದಿಗೆ ಮಾತನಾಡಿದರೆ, ಎ-1 ರಿಂದ ಎ-6 ನೇಯವರು ಫಿರ್ಯಾದಿಯನ್ನು ಉದ್ದೇಶಿಸಿ ಪರಪುರಷರೊಂದಿಗೆ ಅನೈತಿಕ ಸಂಬಂಧ ಕಲ್ಪಿಸಿ ಸಣ್ಣಪುಟ್ಟ ವಿಷಯಕ್ಕೆ ಜಗಳ ತೆಗೆದು ಹಲ್ಲೆ ಮಾಡಿ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುತ್ತಾ ಬಂದಿದ್ದು ಮದುವೆ ವೇಳೆ ಎ-1 ನೇಯವರು ಫಿರ್ಯಾದಿಯ ತವರು ಮನೆಯಿಂದ 30,000/- ರೂ. ನಗದು,15 ತೊಲೆ ಬಂಗಾರ ವರದಕ್ಷಿಣೆಯಾಗಿ ಪಡೆದುಕೊಂಡಿದಲ್ಲದೇ ಮತ್ತೆ ಹಣ ತರುವಂತೆ ಪೀಡಿಸಿ ಫಿರ್ಯಾದಿ ಕಡೆಯಿಂದ ಹಣ ತರಿಸಿಕೊಂಡು ಖರ್ಚು ಮಾಡಿದಲ್ಲದೇ ಎ-1 ನೇಯವರು ಮಾಡಿದ ತನ್ನ ಹಳೆ ಸಾಲ ತಿರಿಸಲು ತನ್ನ ಮನೆಯನ್ನು ಮಾರಾಟಕ್ಕೆ ತೆಗೆದಾಗ ಪಿರ್ಯಾದಿ ತವರು ಮನೆ ಕಡೆಯವರು ಸದರಿ ಮನೆಯನ್ನು 17 ಲಕ್ಷ ರೂ. ಗಳಿಗೆ ಖರೀದಿಸಿ ಫಿರ್ಯಾದಿ ಮತ್ತು ಎ-01. ನೇಯವರಿಗೆ ಉಳಿಯಲು ಬಿಟ್ಟುಕೊಟ್ಟಿರುತ್ತಾರೆ. ಆದರೂ ಸಹ ಎ-1 ನೇಯವರು ಇತರೆ ಆರೋಪಿತರೊಂದಿಗೆ ಸೇರಿ ಒಳಸಂಚು ರೂಪಿಸಿ ಎ-7 ನೇಯವರೊಂದಿಗೆ ಎರಡನೇಯ ಮದುವೆ ಮಾಡಿಕೊಂಡು ಅವಳ ಪ್ರಚೋದನೆ ಮೇರೆಗೆ ಫಿರ್ಯಾದಿಗೆ ನೇರವಾಗಿ ಮತ್ತು ಪೋನಿನಲ್ಲಿ ಸದ್ಯ ಯಲ್ಲಾಪುರ ಇಸ್ಲಾಂ ಗಲ್ಲಿಯಲ್ಲಿರುವ ಫಿರ್ಯಾದಿಯ ತಾಯಿಯವರ ಹೆಸರಿಗೆ ಇರುವ ಮನೆ ತನ್ನ ಹೆಸರಿಗೆ ಮಾಡಿಕೊಡು ಇಲ್ಲವಾದರೇ ತವರು ಮನೆಯಿಂದ ಹಣ ತೆಗೆದುಕೊಂಡು ಬಾ ಅಥವಾ ತವರು ಮನೆಗೆ ಹೋಗು ಸೂಳೆ, ರಂಡೆ, ಅಂತಾ ಅವಾಚ್ಯವಾಗಿ ಬೈಯ್ದು ದಿನಾಂಕ : 26-12-2019 ರಂದು ರಾತ್ರಿ 11-00 ಗಂಟೆಗೆ ತನ್ನ ಮನೆಯಲ್ಲಿ ಫಿರ್ಯಾದಿಯ ಕೂದಲು ಹಿಡಿದು ಎಳೆದಾಡಿ ಗೋಡೆಗೆ ಮತ್ತು ಫ್ರಿಡ್ಜಗೆ ಗುದ್ದಿಸಿ ಸಾದಾ ಗಾಯನೋವು ಪಡಿಸಿ ದಿ: 05-01-2020 ರಂದು ಬೆಳಗ್ಗಿನ ಜಾವ 02-00 ಗಂಟೆ ಸುಮಾರಿಗೆ ಫಿರ್ಯಾದಿಯೊಂದಿಗೆ ಸುಕಾಸುಮ್ಮನೆ ಜಗಳ ತೆಗೆದು ಅವಳ ಕೊಲೆ ಮಾಡುವ ಉದ್ದೇಶದಿಂದ ಫಿರ್ಯಾದಿಯ ಹೊಟ್ಟೆಗೆ ಚಾಕು ಇರಿಯಲು ಬಂದಾಗ ಫಿರ್ಯಾದಿ ತಪ್ಪಿಸಿಕೊಂಡು ಬೆಡ್ ಮೇಲೆ ಬಿದಿದ್ದು ಅಲ್ಲೆ ಬೆಡ್ ಮೇಲೆ ಇದ್ದ ದಿಂಬನ್ನು ತೆಗೆದುಕೊಂಡು ಫಿರ್ಯಾದಿಗೆ ಮುಖಕ್ಕೆ ಒತ್ತಿ ಕೊಲೆ ಮಾಡಲು ಪ್ರಯತ್ನಿಸಿದಲ್ಲದೇ ದಿ: 17-12-2019 ರಂದು ಮತ್ತು ದಿ: 07-01-2020 ರಂದು ಫಿರ್ಯಾದಿಗೆ ತಲಾಖ್ ತಲಾಖ್ ತಲಾಖ್ ಅಂತಾ ತ್ರೀವಳ ತಲಾಖ್ ನೀಡಿರುತ್ತಾರೆ. ಮತ್ತು ಇದರಲ್ಲಿಯ ಎ- 5 | |

| | | | | |
|---|---|---|---|---|
| | | | ನೇಯವರು ದಿ: 16-09-2019 ರಂದು ಫಿರ್ಯಾದಿಯ ಮನೆಗೆ ಬಂದು ಫಿರ್ಯಾದಿಗೆ " ರಾಂಡಾ" ಅಂತಾ ಅವಾಚ್ಯ ಬೈಯ್ದು ಕೈಯಿಂದ ಕಳಾಪಕ್ಕೆ ಹೊಡೆದು ಫಿರ್ಯಾದಿಯೊಂದಿಗೆ ಅಸಭ್ಯವಾಗಿ ವರ್ತಿಸಿ ಅವಳ ಮಾನಕ್ಕೆ ಕುದುಂಟಾಗುವಂತೆ ವರ್ತಿಸಿ ಮೇಲಿನಂತೆ ಆರೋಪಿತರೆಲ್ಲರೂ ಸಮಾನ ಉದ್ದೇಶದಿಂದ ಅಪರಾಧ ಎಸಗಿದ್ದು ಕ್ರಮ ಜರೂಗಿಸುವುದು ಎಂಬಿತ್ಯಾದಿ ವಿವರ. | |
| 47. | ಭಟ್ಕಳ ನಗರ ಪೊಲೀಸ್ ಠಾಣೆ | 58/2021 ಕಲಂ:4 The Muslim Women Protection Of Rights On Marriage Act-2019 & ಕಲಂ-498(ಎ), 420, 504 ಸಹಿತ 34 ಐಪಿಸಿ | ಫಿರ್ಯಾದಿ ಶ್ರೀಮತಿ ಹಾಜೀರಾ ನಾಜ್ನೀನ ಮುಸಬಾ ಗಂಡ ನಾಸೀರ ಹುಸೇನ ಪ್ರಾಯ:37 ವರ್ಷ, ಸಾ::ಅಲ್ ಮುಸಬಾ ಹೌಸ್, ಮ್ಯಾಂಗೋಪಾಮ್ ಎದುರಿಗೆ, ಹೆಬಳೆ, ಹೆಗ್ಗಲ್, ತಾ:ಬಟ್ಕಳ ಇವರು ಮಾನ್ಯ ನ್ಯಾಯಾಲಯದಲ್ಲಿ ನೀಡಿದ ಖಾಸಗಿ ದೂರು ಸಂಖ್ಯೆ 473/2020 ನೇದು ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲು ಠಾಣೆಗೆ ಕಳುಹಿಸಿಕೊಟ್ಟಿದ್ದನ್ನು ಸ್ವೀಕರಿಸಿದ್ದು ಅದರಲ್ಲಿ ಪಿರ್ಯಾದಿಯವರ ಗಂಡ ಆಪಾದಿತ 1 ನೇಯವನಾದ ನಾಸೀರ ಹುಸೈನ್ ತಂದೆ ಮಹಮ್ಮದ ಝುಬೇರ ಮೋಹತೇಶಾಮ ಪ್ರಾಯ:40ವರ್ಷ, ಸಾ:ನಾಸೀರ ಮೆನ್ಸ್‌ನ್ ತಬ್ರೇಜ್ ಪೋಲಟ್ರಿ ಫೋಮ್, ಮದೀನಾ ಕಾಲೋನಿ, ಜಾಮೀಯಾ ರಸ್ತೆ ತಾ:ಭಟ್ಕಳ ಈತನು ಪಿರ್ಯಾದಿಯವರೊಂದಿಗೆ ದಿ:17-09-2018 ರಂದು ಮುಸ್ಲಿಂ ಪದ್ಧತ್ತಿನಂತೆ ಮದುವೆ ಮಾಡಿಕೊಂಡು ಪಿರ್ಯಾದಿಯವರನ್ನು ಕರೆದುಕೊಂಡು ಹೋಗಿ ಭಟ್ಕಳ ತಾಲೂಕಿನ ಮದೀನಾ ಕಾಲೋನಿ, ಜಾಮೀಯಾ ರಸ್ತೆಯಲ್ಲಿ ತಬ್ರೇಜ್ ಪೋಲಟ್ರಿ ಫೋಮ್ ಹತ್ತಿರ ಇರುವ ನಾಸೀರ ಮೆನ್ಸ್‌ನ್, ಎಂಬ ಮನೆಯಲ್ಲಿ ಉಳಿಸಿಕೊಂಡು ಉಳಿದ ಆಪಾದಿತರಾದ ಅ:ನಂ: 2 ರಿಂದ 5 ನೇಯವರೊಂದಿಗೆ ಸೇರಿಕೊಂಡು ವಿನಾಕಾರಣ ದೈಹಿಕ ಹಾಗೂ ಮಾನಸಿಕ ಹಿಂಸೆ ಕೊಡುತ್ತಾ ಬಂದಿರುತ್ತಾನೆ ಎಂಬಿತ್ಯಾದಿ ಸಾರಾಂಶ ಪಿರ್ಯಾದಿಯವರ ದೂರಿನಲ್ಲಿ ನಮೂದಿರುತ್ತದೆ. | ತನಿಖೆ |
| **ಕಲಬುರಗಿ ಜಿಲ್ಲೆ** | | | | |
| 48. | ಚಿಂಚೋಳಿ ಠಾಣೆ | ಗುನ್ನೆ ನಂ: 142/2019 ಕಲಂ: 498(ಎ) 504, 506 ಐ.ಪಿ.ಸಿ & 3. 4 ಡಿ.ಪಿ ಕಾಯ್ದೆ ಹಾಗೂ 3, 4 The Muslim Women (Protection of Rights on Marriage) Act, 2019 | ಸದರಿ ಪ್ರಕರಣದಲ್ಲಿ ಫಿರ್ಯಾದಿ ಶಕೀಲಾ ಬೇಗಂ ಇವಳಿಗೆ ಗಂಡ ಅಮೀರ ಪಾಷಾ ಇವನು ಸುಮಾರು 6 ತಿಂಗಳಿಂದ ಹೆಂಡತಿಗೆ ವರದಕ್ಷಣೆ ಕಿರುಕುಳ ನೀಡಿ ಮಾನಸಿಕ & ದೈಹಿಕವಾಗಿ ಕಿರಕುಳ ನೀಡಿದ್ದು ಸದರಿಯವಳಿಗೆ ದಿನಾಂಕ: 29/11/2019 ರಂದು 2:00 ಎ.ಎಮ್ ಕ್ಕೆ ಕೊಳ್ಳೂರು ಗ್ರಾಮದಲ್ಲಿರುವ ತವರು ಮನೆಗೆ ಕರೆದುಕೋಂಡು ಬಂದು ಕಿರಕುಳ ನೀಡಿ ತೀನ್ ತಲಾಕ್ ಹೇಳಿ ಹೋದ ಬಗ್ಗೆ ಫಿರ್ಯಾದಿ ಇರುತ್ತದೆ | ಸಿ.ಸಿ ನಂ: 1725/2020 ದಿನಾಂಕ: 29/12/2021 ರಂದು ಎನ್.ಬಿ.ಡಬ್ಲೂ ಆಗಿರುತ್ತದೆ |
| **ರಾಯಚೂರು ಜಿಲ್ಲೆ** | | | | |

| | | | | |
|---|---|---|---|---|
| 49. | ಮಹಿಳಾ ಪೊಲೀಸ್ ಠಾಣೆ ರಾಯಚೂರು | 111/2019, ಕಲಂ. 498(ಎ) 323 504 506 ಸಹಿತ 34 ಐಪಿಸಿ ಮತ್ತು 3 & 4 ಡಿ.ಪಿ ಯಾಕ್ಟ್ ಹಾಗೂ 3 & 4 The Muslim Women Protection Of Rights On Marriage Act-2019 | ದಿನಾಂಕ: 20.06.2018 ರಂದು ಫಿರ್ಯಾದಿ ಮತ್ತು ಆರೋಪಿ ನಂ 1 ರವರು ಹಿರಿಯರ ಸಮಕ್ಷಮದಲ್ಲಿ ರಾಯಚೂರು ನಗರದ ಪಾಲ್ಕಿ ಫಂಕ್ಷನ್ ಹಾಲ್ ನಲ್ಲಿ ಮದುವೆಯಾಗಿದ್ದು ಮದುವೆಯ ಸಮಯದಲ್ಲಿ ಆರೋಪಿತರು ಫಿರ್ಯಾದಿದಾರಳ ತವರು ಮನೆಯಿಂದ 2 ಲಕ್ಷ ನಗದು ಹಣ ಮತ್ತು ಅರ್ಧ ತೊಲೆ ಬಂಗಾರದ ಉಂಗುರ ವರದಾಕ್ಷಣೆಯಾಗಿ ಪಡೆದುಕೊಂಡಿರುತ್ತಾರೆ. ಮದುವೆಯಾದ 3 ತಿಂಗಳ ನಂತರ ವಿನಾಃ ಕಾರಣ ಆರೋಪಿ ನಂ 1 ರವರು ಆರೋಪಿ ನಂ 2 ಮತ್ತು 3 ರವರ ಮಾತು ಕೇಳಿ ಫಿರ್ಯಾದಿಗೆ ಅವಾಚ್ಯವಾಗಿ ಬೈದು ಕೈಗಳಿಂದ ಹೊಡೆಬಡೆ ಮಾಡಿ ಜೀವದ ಬೆದರಿಕೆ ಹಾಕಿದ್ದು ಅಲ್ಲಧೇ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ್ದು ಅಲ್ಲದೇ ಆರೋಪಿ ನಂ 1 ರವರು ಫಿರ್ಯಾದಿಗೆ ನಿನಗೆ ತಲಾಕ್ ಮಾಡಿರುತ್ತೇನೆಂದು ಮೂರು ಬಾರಿ ಹೇಳಿರುತ್ತಾನೆ. ಅಂತಾ ಇದ್ದ ದೂರಿನ ಸಾರಾಂಶದ ಮೇಲಿಂದ ಮಹಿಳಾ ಪೊಲೀಸ್ ಠಾಣೆ ಗುನ್ನೆ ನಂ 111/2019 ಕಲಂ 498ಎ, 323, 504, 506 ರೆ/ವಿ 34 ಐಪಿಸಿ ಮತ್ತು ಕಲಂ 3 &4 ಡಿ.ಪಿ ಆಕ್ಟ್ ಮತ್ತು ಕಲಂ 3 & 4 The Women Protection Of Rights On Marriage Act-2019 ಪ್ರಕಾರ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಂಡಿದ್ದು ಇದೆ. | ಸಿ.ಸಿ. 164/2020 ರ ಪ್ರಕಾರ ನ್ಯಾಯಾಲಯದ ವಿಚಾರಣೆಯಲ್ಲಿದೆ |
| **ಶಿವಮೊಗ್ಗ ಜಿಲ್ಲೆ** | | | | |
| 50. | ಮಹಿಳಾ ಪೊಲೀಸ್ ಠಾಣೆ, ಶಿವಮೊಗ್ಗ | ಗುನ್ನೆ ನಂ: 64/19 ಕಲಂ: 498[ಎ] ಐಪಿಸಿ & ಕಲಂ: 4 ಆಫ್ ದಿ ಮುಸ್ಲಿಂ ವುಮೆನ್ ಪ್ರೋಟೆಕ್ಷನ್ ಆಫ್ ರೈಟ್ಸ್ ಆನ್ ಮ್ಯಾರೇಜ್ ಆಕ್ಟ್-2019 | ಪಿರ್ಯಾದಿಗೆ ದಿ:29-06-1998 ರಂದು 1ನೇ ಆರೋಪಿ ಯೊಂದಿಗೆ ಮದುವೆಯಾಗಿದ್ದು, ಮದುವೆಯಾಗಿ 5 ವರ್ಷಗಳಾದರೂ ಮಕ್ಕಳಾಗದ ಕಾರಣ ಒಂದು ಹೆಣ್ಣು ಮಗುವನ್ನು ದತ್ತು ತೆಗೆದುಕೊಂಡು ಸಾಕಿಕೊಂಡಿದ್ದು, ನಂತರ ಪಿರ್ಯಾದಿಯ ಗಂಡ ದುಬೈಗೆ ಹೋಗಿದ್ದರು. ಪಿರ್ಯಾದಿ ತವರು ಮನೆಯಲ್ಲಿ ವಾಸವಾಗಿದ್ದರು. ಪಿರ್ಯಾದಿಯ ಗಂಡ ದುಬೈಗೆ ಹೋಗಿದ್ದು, ಪ್ರತಿ ವರ್ಷ ಮಗುವಿನ ಹುಟ್ಟು ಹಬ್ಬಕ್ಕೆ ಬಂದು ಅದ್ದೂರಿಯಾಗಿ ಆಚರಣೆ ಮಾಡಿ ಹೋಗುತ್ತಿದ್ದರು. ನಂತರ 2018ನೇ ಸಾಲಿನಲ್ಲಿ ನವೆಂಬರ್ ತಿಂಗಳಲ್ಲಿ ದುಬೈನಿಂದ ಮಗುವಿನ ಹುಟ್ಟು ಹಬ್ಬಕ್ಕೆ ಬಂದಿದ್ದು, 2019ನೇ ಸಾಲಿನ ಜನವರಿ ತಿಂಗಳಲ್ಲಿ ವಾಪಾಸ್ಸು ಹೋಗಿದ್ದು, ನಂತರ ಪೋನ್‌ನಲ್ಲಿ ಜಗಳ ಮಾಡಲು ಪ್ರಾರಂಭಿಸಿದ್ದು, 3 ಬಾರಿ ತಲಾಕ್ ಎಂದು ಕೂಗಿರುತ್ತಾರೆ. ಆದ್ದರಿಂದ ಆರೋಪಿತರ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕೆಂಬ ದೂರಿನ ಮೇರೆಗೆ ಪ್ರವ.ವರದಿ. | ಸಿಸಿ ನಂಬರ್ 328/2020 ರಲ್ಲಿ ವಿಚಾರಣೆ<br><br>ದಿನಾಂಕ:29-12-2021 |

| | | | | |
|---|---|---|---|---|
| 51. | ಮಹಿಳಾ ಪೊಲೀಸ್ ಠಾಣೆ, ಶಿವಮೊಗ್ಗ. | ಗುನ್ನೆ ನಂ: 08/2021 ಕಲಂ.04 ಅಪ್ ಮುಸ್ಲಿಂ ಪ್ರೋಟೆಕ್ಷನ್ ಅಪ್ ರೈಟ್ಸ್ ಆನ್ ಮ್ಯಾರೇಜ್ ಆಕ್ಟ್ –2019 | ಪಿರ್ಯಾದಿ 9 ವರ್ಷದ ಹಿಂದೆ ಮದುವೆಯಾಗಿದ್ದು ಗಂಡನೊಂದಿಗೆ ಯು.ಎ.ಇ ಗೆ ಹೋಗಿ ನೆಲಸಿದ್ದು 2 ಜನ ಮಕ್ಕಳಿರುತ್ತಾರೆ. ಪಿರ್ಯಾದಿ ಕೆಲಸ ಮಾಡಲು ಪಿರ್ಯಾದಿ ಗಂಡ ಒಪ್ಪದಿದ್ದಾಗ ಇಬ್ಬರ ನಡುವೆ ಭಿನ್ನಾಭಿಪ್ರಾಯ ಬಂದಿದ್ದು ಶಾರ್ಜಾದ ಕೌಟುಂಬಿಕ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ತಿಂಗಳಿಗೆ 3500/- ಜೀವನಾಂಶ ಕೊಡುವಂತೆ ಆದೇಶ ಮಾಡಿದ್ದು ಜೀವನಾಂಶ ಕೊಟ್ಟಿರುವುದಿಲ್ಲ ಅಲ್ಲಿಯೇ ಪಿರ್ಯಾದಿ ಮತ್ತು ಮಕ್ಕಳನ್ನು ಬಿಟ್ಟು ಬಂದಿದ್ದು ನಂತರ ಪಿರ್ಯಾದಿದಾರರು ಮಕ್ಕಳೊಂದಿಗೆ ಭಾರತಕ್ಕೆ ಬಂದಿರುತ್ತಾರೆ ದಿ: 03-03-20 ರಂದು ಮಜರ್ ಕಾನ್ ಆಸ್ಟ್ರೇಲಿಯಾಕ್ಕೆ ಹೋಗಬೇಕಾಗಿದ್ದು ಜಂಟಿ ಖಾತೆಯಲ್ಲಿರುವ 2.5 ಲಕ್ಷ ಹಣ ಕೊಡುವಂತೆ ಒತ್ತಾಯ ಮಾಡಿದ್ದು ಇದಕ್ಕೆ ನಿರಾಕರಿಸಿದ್ದಕ್ಕೆ ಹೊಡೆದು ಹಿಂಸೆ ಮಾಡಿದ್ದು ಈ ವಿಚಾರವಾಗಿ ಠಾಣೆಯಲ್ಲಿ ದೂರು ನೀಡಿದ್ದು ಈ ವಿಚಾರವಾಗಿ ಮಾನ್ಯ 3 ನೇ ಹೆಚ್ಚುವರಿ ಮತ್ತು ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ಯಲ್ಲಿರುವಾಗಲೇ ದಿ:20-10-20 ರಂದು ಬೆಳಗ್ಗೆ 11.09 ಎಎಂ ಗೆ ಪೋಸ್ಟ್ ಮುಖಾಂತರ ತಲಾಖ್ ಇ ಬೈನ್ ನೀಡಿರುತ್ತಾನೆ ಇದು ಮೊಹಮ್ಮದಿಯ ಕಾನೂನಿನ ರೀತಿಯಲ್ಲಿರದೆ ಕೇವಲ ತ್ರಿಬಲ್ ತಲಾಖ್ ಆಗಿರುತ್ತದೆ. ತ್ರಿಬಲ್ ತಲಾಖ್ ಪೋಸ್ಟ್ ಮುಖಾಂತರ ನೀಡಿದ ಆರೋಪಿತನ ವಿರುದ್ಧ ಪ್ರವ. ವರದಿ | ಸದರಿ ಪ್ರಕರಣದಲ್ಲಿ ಬಿ ಅಂತಿಮ ವರದಿ ಸಲ್ಲಿಸಿದ್ದು, ಅಂಗಿಕಾರಕ್ಕಾಗಿ ಬಾಕಿ. ಮುದ್ದತ್ ದಿನಾಂಕ. ದಿ:08-12-2021 |